Swabhimani Sahakari

# ಸ್ವಾಭಿಮಾನಿ ಸಹಕಾರಿ

Pages : 33 / 20₹

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಯುಕ್ತ ಸಹಕಾರಿಯ ರಜತ ಮಹೋತ್ಸವ 2026

Volume - 23
Issue - 03
March - 2026



ಮಾರ್ಚ್ 19
ಯುಗಾದಿ

ಬಂದ ಚೈತ್ರದ ಹಾದಿ
ತೆರೆದಿದೆ
ಬಣ್ಣ-ಬೆಡಗಿನ
ಮೋಡಿಗೆ
ಹೊಸತು ವರ್ಷದ
ಹೊಸತು ಹರ್ಷದ
ಬೇವು-ಬೆಲ್ಲದ
ಬೀಡಿಗೆ...
- ಜಿ.ಎಸ್.ಶಿವರುದ್ರಪ್ಪ



ಮಾರ್ಚ್ ೦3
ಹೋಳಿ



ಮಾರ್ಚ್ ೦8
ಅಂತರರಾಷ್ಟ್ರೀಯ ಮಹಿಳಾ ದಿನ




ಮಾರ್ಚ್ 21
ರಂಜಾನ್



ಮಾರ್ಚ್ 23
ದೇವರ ದಾಸಿಮಯ್ಯ ಜಯಂತಿ



ಮಾರ್ಚ್ 27
ಶ್ರೀರಾಮ ನವಮಿ



ಮಾರ್ಚ್ 31
ಮಹಾವೀರ ಜಯಂತಿ

ಸೌಹಾರ್ದ ಸಹಕಾರಿಗಳ ಸಂಖ್ಯೆ: 6676

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1760



ಜಿ. ನಂಜನಗೌಡ

ಎಲ್ಲ ಸಹಕಾರಿ ಬಂಧುಗಳಿಗೆ ಹೋಳಿಹಬ್ಬ, ಚಾಂದ್ರಮಾನ ಯುಗಾದಿ, ರಂಜಾನ್ ಮತ್ತು ಮಹಾವೀರ ಜಯಂತಿಯ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು. "ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ." ಎಂಬ ವರಕವಿ ದ.ರಾ. ಬೇಂದ್ರೆಯವರ ಕವನದಂತೆ ಯುಗಾದಿ ಎಲ್ಲರ ಬಾಳಿನಲ್ಲಿ ಹೊಸತನ್ನು ತರಲಿ. ಶಾಂತಿ ಸಮೃದ್ಧಿ ನೆಮ್ಮದಿ ನಿಮ್ಮದಾಗಲಿ. ನವೋತ್ಸಾಹದಿಂದ ನಾವೆಲ್ಲ ಅಭಿವೃದ್ಧಿಯತ್ತ ಗಮನ ಹರಿಸೋಣ

# ಸಾಲ ವಸೂಲಾತಿ ಚುರುಕಾಗಲಿ, ಎನ್.ಪಿ.ಎ ಪ್ರಮಾಣ ಶೂನ್ಯಯಿರಲಿ, ಲಾಭಾಂಶ ಹೆಚ್ಚಲಿ.

**ಆತ್ಮೀಯ ಸಹಕಾರಿ ಬಂಧುಗಳೇ,**

ಎಲ್ಲ ಸಹಕಾರಿ ಬಂಧುಗಳಿಗೆ ಹೋಳಿಹಬ್ಬ, ಚಾಂದ್ರಮಾನ ಯುಗಾದಿ, ರಂಜಾನ್ ಮತ್ತು ಮಹಾವೀರ ಜಯಂತಿಯ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು. "ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ." ಎಂಬ ವರಕವಿ ದ.ರಾ. ಬೇಂದ್ರೆಯವರ ಕವನದಂತೆ ಯುಗಾದಿ ಎಲ್ಲರ ಬಾಳಿನಲ್ಲಿ ಹೊಸತನ್ನು ತರಲಿ. ಶಾಂತಿ ಸಮೃದ್ಧಿ ನೆಮ್ಮದಿ ನಿಮ್ಮದಾಗಲಿ. ನವೋತ್ಸಾಹದಿಂದ ನಾವೆಲ್ಲ ಅಭಿವೃದ್ಧಿಯತ್ತ ಗಮನ ಹರಿಸೋಣ. ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಮುನ್ನಡೆಸೋಣ. ಮಾರ್ಚ ತಿಂಗಳಲ್ಲಿ ಎಲ್ಲ ಸಹಕಾರ ಸಂಸ್ಥೆಗಳು ವಿಶೇಷವಾಗಿ ಪತ್ತಿನ ವ್ಯವಹಾರ ಮಾಡುವ ಸಹಕಾರಿ ಸಂಸ್ಥೆಗಳು ತಾವು ನೀಡಿರುವ ಸಾಲಗಳ ವಸೂಲಾತಿ ಕಡೆಗೆ ಹೆಚ್ಚಿನ ಗಮನವನ್ನು ನೀಡುವುದು ಅವಶ್ಯಕ. ಸಹಕಾರಿ ಸಂಸ್ಥೆಗಳ ಆರ್ಥಿಕ ವರ್ಷ ಮಾರ್ಚ್ ಕೊನೆಗೆ ಮುಕ್ತಾಯವಾಗುವುದರಿಂದ ಲೆಕ್ಕ ಪತ್ರಗಳನ್ನು ಅಂತಿಮಗೊಳಿಸಬೇಕಾಗುತ್ತದೆ. ಲೆಕ್ಕ ಪತ್ರಗಳನ್ನು ಮುಕ್ತಾಯ ಮಾಡುವಾಗ ಕೊಡಬೇಕಾದ ಬಾಬ್ತುಗಳು ಮತ್ತು ಬರಬೇಕಾದ ಬಾಬ್ತುಗಳ ಬಗ್ಗೆ ಗಮನ ಹರಿಸಿ ಅವುಗಳನ್ನು ಅಂತಿಮ ಗೊಳಿಸಲು ಕ್ರಮ ಅಗತ್ಯ. ವಿಶೇಷವಾಗಿ ಸಹಕಾರಿಗಳ ಲಾಭದ ಪ್ರಮಾಣ ಹೆಚ್ಚುವರಿಯಾಗಬೇಕಾದರೆ ನಾವು ನೀಡಿದ ಸಾಲಗಳು ಸಂಪೂರ್ಣವಾಗಿ ವಸೂಲಾಗಬೇಕು.

ಸಾಲ ವಸೂಲಾತಿ ಸಾಮೂಹಿಕ ಜವಾಬ್ದಾರಿಯಾದಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಸಾಲ ವಸೂಲಾತಿ ಕ್ರಮ ವಿಳಂಬವಾದಲ್ಲಿ ಕಾನೂನು ಹಾಗೂ ನಿಯಮಾವಳಿಗಳ ಪ್ರಕಾರ ಕ್ರಮ ವಿಡುವುದನ್ನು ವಿಳಂಬ ಮಾಡಬಾರದು. ಲಾಭ ಸಹಕಾರಿಯ ಪ್ರಗತಿಯ ಸಂಕೇತ. ಲಾಭಾಂಶದ ಪ್ರಮಾಣ ಹೆಚ್ಚಿಸಬೇಕಾದರೆ ವ್ಯವಹಾರ ಹೆಚ್ಚಾಗಬೇಕು. ಸಾಲ ವಸೂಲಾತಿ ಹೆಚ್ಚಾಗಬೇಕು. ಹಣಕಾಸಿನ ಶಿಸ್ತು ಪಾಲಿಸಬೇಕು. ಸೋರಿಕೆಯನ್ನು ತಡೆಗಟ್ಟಬೇಕು. ನಂತರ ಕಾನೂನು ಹಾಗೂ ನಿಯಮಾವಳಿಗಳ ಪ್ರಕಾರ ಲಾಭ ವಿತರಣೆ ಮಾಡಬೇಕು.

ಸಹಕಾರಿ ಕ್ಷೇತ್ರದ ಅಭಿವೃದ್ಧಿ ಆಡಳಿತ ಮಂಡಳಿಯ, ಸಿಬ್ಬಂದಿಯ ಹಾಗೂ ಸದಸ್ಯರ ಪೂರ್ಣ ಜವಾಬ್ದಾರಿ. ಈ ಜವಾಬ್ದಾರಿಯ ಅರಿವು ಮೂಡಿಸುವುದಕ್ಕಾಗಿ ಸಂಯುಕ್ತ ಸಹಕಾರಿ ಎಲ್ಲ ಹಂತದಲ್ಲೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ತರಬೇತಿಯಲ್ಲಿ ಭಾಗವಹಿಸಿ. ಹೆಚ್ಚಿನ ವಿಚಾರಗಳನ್ನು ತಿಳಿದು ಸಹಕಾರಿಯ ಅಭಿವೃದ್ಧಿಯಲ್ಲಿ ಪಾಲುದಾರರಾಗುವುದು ಅವಶ್ಯಕ.

**ಮಹಿಳಾ ದಿನಾಚರಣೆ ಯಶಸ್ವಿಯಾಗಲಿ :**

ಪ್ರತಿ ವರ್ಷದಂತೆ ಈ ಬಾರಿಯೂ ಮಾರ್ಚ್ 08 ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಮಹಿಳೆಯರಿಗೆ ಜೀವನದ ಎಲ್ಲಾ ಸ್ತರಗಳಲ್ಲಿ ಪ್ರಾಮುಖ್ಯತೆಯನ್ನು ನೀಡುವಂತಹ ಕಾರ್ಯಕ್ರಮಗಳನ್ನು ಸೌಹಾರ್ದ ಸಹಕಾರಿಗಳು ಹಮ್ಮಿಕೊಳ್ಳುವುದು ಹಾಗೂ ಮಹಿಳೆಯರು ಸಹಕಾರಿ ಕ್ಷೇತ್ರದ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯತ್ತ ಸಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ. ಈ ಕಾರ್ಯದಲ್ಲಿ ತಾವುಗಳು ಕೈಜೋಡಿಸುವಿರಾಗಿ ಅಪೇಕ್ಷಿಸಿದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........ 2
ಸಂಪಾದಕೀಯ........ 3
ಜ್ಞಾನ ಜ್ಯೋತಿ........ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ 05–23
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 24–29
**ಲೇಖನಗಳು :**
**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026**
ಧ್ಯೇಯ : ಹಕ್ಕು, ನ್ಯಾಯ ಮತ್ತು ಕ್ರಿಯೆ : ಮಹಿಳಾ ಸಮಾನತೆಗೆ ಹೊಸ ದಿಕ್ಸೂಚಿ ........ 30–31
ಅಂಗವಿಕಲತೆಯನ್ನ ಮೆಟ್ಟಿ ಎವರೆಸ್ಟ್‌ನಲ್ಲಿ ತ್ರಿವರ್ಣ ಧ್ವಜ ಹಾರಿಸಿದ ಯುವತಿ ........ 32–33

# ಸಂಪಾದಕೀಯ

## ಆಂತರಿಕ ಲೆಕ್ಕ ಪರಿಶೋಧನೆ

ಸಹಕಾರಿ ಸಂಸ್ಥೆಗಳು ಈಗ ಕೇವಲ ಸೇವಾ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿಲ್ಲ. ಉತ್ತಮ ಆರ್ಥಿಕ ವ್ಯವಹಾರಿಕ ಸಂಸ್ಥೆಗಳಾಗಿವೆ. ಪ್ರಸಕ್ತ ಅರ್ಥ ವ್ಯವಸ್ಥೆಯ ಎಲ್.ಪಿ.ಜಿ. ಯುಗದಲ್ಲಿ ಖಾಸಗಿಯವರೂಂದಿಗೆ ಪೈಪೋಟಿ ಮಾಡಿ AI ಅನ್ನು ಬಳಸಿಕೊಂಡು ಉತ್ತಮ ವ್ಯವಹಾರಿಕ ಸಂಸ್ಥೆಗಳಾಗಿ ಬೆಳೆಯುವ ಅವಶ್ಯಕತೆ ಇದೆ. ಉತ್ತಮ ಸೇವೆಗಳನ್ನು ನೀಡುತ್ತ ಉತ್ತಮ ವ್ಯವಸ್ಥೆಗಳಾಗಿ ಹೊರಹೊಮ್ಮಿವೆ. ಉತ್ತಮ ಲಾಭ ಗಳಿಸುತ್ತಿವೆ. ಸದಸ್ಯರ ಬೇಕು ಬೇಡಿಕೆಗಳಿಗೆ ಸ್ಪಂದಿಸುತ್ತಿವೆ. ಸಹಕಾರಿ ಕ್ಷೇತ್ರದಲ್ಲಿ ಇದೊಂದು ಉತ್ತಮ ಬೆಳವಣಿಗೆ.

ಸಹಕಾರಿ ಸಂಸ್ಥೆಗಳ ವ್ಯವಹಾರ ಹೆಚ್ಚಿದಂತೆಲ್ಲ ಲೆಕ್ಕ ಪತ್ರಗಳ ನಿರ್ವಹಣೆ ಅತ್ಯಂತ ದೊಡ್ಡ ಜವಾಬ್ದಾರಿ. ವ್ಯವಸ್ಥಿತವಾಗಿ ಕಾನೂನು, ನಿಯಮಗಳ ಪಾಲನೆ, ಸಹಕಾರಿಯ ಉಪವಿಧಿಗಳ ಅಡಿಯಲ್ಲಿ ಲೆಕ್ಕಪತ್ರಗಳ ನಿರ್ವಹಣೆಯಾಗಬೇಕಾಗುತ್ತದೆ. ಲೆಕ್ಕ ಪತ್ರಗಳ ಶಿಸ್ತು ಬದ್ಧ ಕ್ರಮದಲ್ಲಿ ನಿರ್ವಹಣೆಗಾಗಿ ಆಂತರಿಕ ಲೆಕ್ಕ ಪರಿಶೋಧನೆ ಅಗತ್ಯವೆನಿಸುತ್ತದೆ. ವರ್ಷಕ್ಕೆ ಒಂದು ಬಾರಿ ಶಾಸನ ಬದ್ಧ ಲೆಕ್ಕಪರಿಶೋಧನೆಯಂತೂ ಕಡ್ಡಾಯವಾಗಿ ಆಗಲೇಬೇಕು. ಆದರೆ ವ್ಯವಹಾರಗಳ ಶಿಸ್ತು ಬದ್ಧ ನಿರ್ವಹಣೆಯ ಅಗತ್ಯತೆಯ ಹಿನ್ನೆಲೆಯಲ್ಲಿ 5 ಕೋಟಿಗಿಂತ ಹೆಚ್ಚಿನ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳು ಆಂತರಿಕ ಲೆಕ್ಕ ಪರಿಶೋಧನೆ ಅಳವಡಿಸಿಕೊಳ್ಳುವ ಅಗತ್ಯತೆ ಇದೆ. ಪ್ರತಿ ನಿತ್ಯದ ಪಾವತಿಗಳನ್ನು ಸಹಕಾರಿಯಿಂದ ನೇಮಕಗೊಂಡ ಆಂತರಿಕ ಲೆಕ್ಕ ಪರಿಶೋಧಕರು ಲೆಕ್ಕಪರಿಶೋಧನೆ ಮಾಡುವುದರಿಂದ ಹಣಕಾಸಿನ ಶಿಸ್ತು ಇರುತ್ತದೆ. ಪಾವತಿ ಕ್ರಮ ಬದ್ಧವಾಗಿರುವ ಬಗ್ಗೆ ತಕ್ಷಣ ಪರಿಶೀಲಿಸದಂತಾಗುತ್ತದೆ. ಯಾವುದೇ ರೀತಿಯ ಅವ್ಯವಹಾರ ಅಥವಾ ಸೋರಿಕೆಗಳನ್ನು ತಡೆಗಟ್ಟಿದಂತಾಗುತ್ತದೆ. ಹೀಗಾಗಿ ಆಂತರಿಕ ಲೆಕ್ಕ ಪರಿಶೋಧನೆ ಪ್ರತಿಯೊಂದು ಸಹಕಾರಿಯಲ್ಲಿ ನಿರ್ವಹಿಸುವುದು ಅವಶ್ಯಕ.

ಆಂತರಿಕ ಲೆಕ್ಕ ಪರಿಶೋಧನೆ ನಿರ್ವಹಣೆಯನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಹಕಾರಿ ಸಂಸ್ಥೆಗಳು ಪ್ರತ್ಯೇಕವಾಗಿ ಲೆಕ್ಕಪರಿಶೋಧಕರ ನೇಮಕ ಮಾಡಿಕೊಳ್ಳುವ ವ್ಯವಸ್ಥೆಗಳನ್ನು ಅನುಸರಿಸಲಾಗುತ್ತಿದೆ. ತಾಲ್ಲೂಕು ಮತ್ತು ಪ್ರಾಥಮಿಕ ಸಹಕಾರಿ ಸಂಸ್ಥೆಗಳಲ್ಲಿ ಈ ಬಗ್ಗೆ ಸಹಕಾರಿಯ ಕೆಲವು ನಿರ್ದೇಶಕರುಗಳು ಮಾಡುವುದನ್ನು ಗಮನಿಸಿದೆ. ಸಹಕಾರಿಯ ಆಸಕ್ತ ನಿರ್ದೇಶಕರು, ಸಹಕಾರಿಯನ್ನು ಪ್ರಾರಂಭದಿಂದಲೂ ಕಟ್ಟಿ ಬೆಳೆಸಿದವರು ಸಹಕಾರಿಯ ಬೆಳವಣಿಗೆಯ ದೃಷ್ಟಿಯಿಂದ ಆರ್ಥಿಕ ವ್ಯವಹಾರಗಳಲ್ಲಿ ಆಸಕ್ತಿ ಹೊಂದಿರುವುದು ಸಹಜ. ಅಂತಹ ನಿರ್ದೇಶಕರು ಸಂಸ್ಥೆಯ ಎಲ್ಲ ಪಾವತಿಗಳನ್ನು ಗಮನಿಸುತ್ತ ಸಹಕಾರಿಯ ಲೆಕ್ಕ ಪತ್ರಗಳ ಗಮನ ಹರಿಸುತ್ತ ಸಹಕಾರಿಯ ಆರ್ಥಿಕ ಶಿಸ್ತಿನ ಕಡೆಗೆ ಗಮನ ಹರಿಸುತ್ತ ಸಹಕಾರಿಯ ಆರ್ಥಿಕ ಅಭಿವೃದ್ಧಿಗೆ ಕಾರಣರಾಗುತ್ತಾರೆ. ಈ ವ್ಯವಸ್ಥೆಯನ್ನು 5 ಕೋಟಿಗಿಂತ ಕಡಿಮೆ ಇರುವ ಎಲ್ಲ ಪ್ರಾಥಮಿಕ ಸಹಕಾರಿಗಳು ಅನುಸರಿಸುವುದು ಅವಶ್ಯಕ.

ಆಂತರಿಕ ಲೆಕ್ಕ ಪರಿಶೋಧನೆಯಿಂದ ಅನಾವಶ್ಯಕ ವೆಚ್ಚಗಳಿಗೆ ಕಡಿವಾಣ, ಪ್ರತಿಯೊಂದು ವ್ಯವಹಾರಗಳ ಪರಿಶೀಲನೆ, ವ್ಯವಹಾರಗಳ ಕ್ರಮಬದ್ಧತೆಯಿಂದ ಆರ್ಥಿಕ ಶಿಸ್ತು ಬೆಳೆಯುತ್ತದೆ. ಹೀಗಾಗಿ ಪ್ರತಿಯೊಂದು ಸಹಕಾರಿಯು ಆಂತರಿಕ ಲೆಕ್ಕ ಪರಿಶೋಧನೆ ಕಾರ್ಯವನ್ನು ನಿರ್ವಹಿಸುವುದು ಅವಶ್ಯಕ.

# "ಶ್ರದ್ಧೆ"

ಭಾಗ–2



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

ಸತ್ಯದಲ್ಲಿ ಎರಡು ಪ್ರಕಾರ 1) ತಾತ್ಕಾಲಿಕ ಸತ್ಯ 2) ಪರಮಸತ್ಯ, ಪರಮಾತ್ಮನೆ ಪರಮಸತ್ಯ. ಆ ಪರಮಾತ್ಮನ ಮೇಲೆ ತೋರಿದ ಈ ಪ್ರಪಂಚವೇ ತಾತ್ಕಾಲಿಕ ಸತ್ಯ. ಅಂತೆಯೇ ನಮ್ಮ ಹಿರಿಯರು ನೆಲ, ಜಲ, ಗಾಳಿ ಬೆಳಕು ಎಲ್ಲದರಲ್ಲಿಯೂ ದೇವರನ್ನು ಕಾಣಲು ಪ್ರಯತ್ನಿಸಿದರು. ಮೀನು ಸಾಗರದಲ್ಲಿದ್ದು ಸಾಗರವನ್ನು ಹುಡುಕಿದರೆ ಅದು ಎಷ್ಟು ಹಾಸ್ಯಾಸ್ಪದವಾಗುತ್ತದೆ. ಅದೇ ರೀತಿ ಸಮಸ್ತ ಪ್ರಪಂಚವೆಲ್ಲವೂ ದೇವಸಾಗರದ ಮೇಲೆಯೇ ತೆರೆಯಂತೆ ತೋರಿರುವಾಗ, ನಾವೆಲ್ಲ ದೇವರನ್ನು ಹುಡುಕುವುದು ? ಆ ಮಹಾದೇವನು ಸಾಗರೋಪಾಧಿಯಲ್ಲಿ ಇರುವನೆಂದು ಈ ಜೀವಮೀನು ನಂಬಿದರೆ ಸಾಕು. ಅದೇ ಶ್ರದ್ಧೆ ಎಂದು ಕರೆಯಿಸಿಕೊಳ್ಳುತ್ತದೆ.

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯುತೇಂದ್ರಿಯಃ ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥

ಈ ಶ್ರದ್ಧೆಯುಳ್ಳವನಿಗೆ ಮನೋನಿಗ್ರಹದಿಂದ ಆತ್ಮಜ್ಞಾನವು ಲಭಿಸುತ್ತದೆ. ಈ ಈ ಆತ್ಮಜ್ಞಾನದಿಂದ ಅವನಿಗೆ ಪರಮಶಾಂತಿ ಅಥವಾ ಆತ್ಮಾನಂದವು ಬೇಗ ಪ್ರಾಪ್ತಿಯಾಗುತ್ತದೆ.

ಅನಂತನೂ, ಅದ್ವಿತೀಯನೋ, ಅಚಲನೂ ಆದ ಆ ಮಹಾದೇವನು ಸಕಲ ಸೃಷ್ಟಿಗೆ ಪರಮಾಧಾರನು. ಆ ಮಹಾದೇವನಲ್ಲಿ ಅಚಲ ವಿಶ್ವಾಸವನ್ನಿಡುವುದೇ ಶ್ರದ್ಧೆ ಎನಿಸುತ್ತದೆ. ಆ ಮಹಾದೇವನನ್ನು ಶಿವಂ ಶಾಂತಂ.. ಎಂದು ಹೇಳಿದರು. ಎಂದರೆ ಆ ಮಹಾದೇವನಿಗೆ ರಾಗ–ದ್ವೇಷ ಏನೂ ಎಲ್ಲ. ಅಂತೆಯೇ ಆ ಮಹಾದೇವನು ಸರ್ವರಿಗೂ ಪ್ರೀಯನು.

ಕೆಲವರು ದೇವರು ಕಾಡುತ್ತಾನೆ ಎನ್ನುತ್ತಾರೆ. ಆದರ ಕಾಡುವುದು ನಮ್ಮ ಮಲಿನ ಮನಸ್ಸೇ ವಿನಾ ದೇವರಲ್ಲ. ಮಕ್ಕಳ ಕುರಿತು ತಾಯಿಯಲ್ಲಿ ಹೇಗೆ ಬರೀ ಪ್ರೇಮಗಂಗೆಯೇ ತುಂಬಿ ಹರಿಯುತ್ತಿರುತ್ತದೆಯೇ ಹಾಗೆಯೆ ದೇವನಲ್ಲಿಯೂ ಕೂಡಾ ಜೀವಿಗಳ ಕುರಿತು ಸದಾವಕಾಲ ಪ್ರೇಮಗಂಗೆ ಪ್ರವಹಿಸುತ್ತಿರುತ್ತದೆ. ಅವನು ಯಾರನ್ನೂ ಎಂದೂ ದ್ವೇಷಿಸುವುದಿಲ್ಲ. ಕಾಡುವುದಿಲ್ಲ.

ಜೀವನದಲ್ಲಿ ಏನನ್ನಾದರೂ ಸಾಧಿಸಬೇಕಾದರೆ ಆ ಮಹಾದೇವನಲ್ಲಿ ಮೊದಲು ಶ್ರದ್ಧೆಯನ್ನಿಡಬೇಕು. ಈ ಶ್ರದ್ಧೆಯೇ ಗಟ್ಟಿಕೊಂಡು ಮುಂದೆ ನಿಷ್ಠೆ ಎಂದೂ ಕರೆಯಿಸಿಕೊಳ್ಳುತ್ತದೆ. ಈ ಪ್ರಪಂಚವನ್ನು ನಾವು ಎಷ್ಟು ಪ್ರೀತಿಸುತ್ತೇವೆಯೋ, ಅದಕ್ಕಿಂತಲೂ ಹೆಚ್ಚಿಗೆ ನಾವು ಪರಮಾತ್ಮನನ್ನು ಪ್ರಿತಿಸಲು ಕಲಿತರೆ, ಅದುವೇ ನಿಷ್ಠಿ ಎನಿಸುತ್ತದೆ. ಈ ದೇವಪ್ರೀತಿಯು ಹೊಯ್ದಾಡಿದರೆ ಅದು ನಿಷ್ಠೆಯಾಗುವುದಿಲ್ಲ.

ಈ ದೇವರು ಜಾಗೃತನಿಲ್ಲ, ಆ ದೇವರು ತುಂಬಾ ಜಾಗೃತನಿದ್ದಾನೆ ಎಂದು ನಮ್ಮ ಮನಸ್ಸು ಚಂಚಲಿಸಿದರೆ ಅದು ನಿಷ್ಠೆ ಅಲ್ಲ. ಗುಡಿಯು ಸಣ್ಣದಾದರೆ ದೇವರು ಸಣ್ಣವನಾಗುವುದಿಲ್ಲ. ನಮ್ಮ ದೇವರ ಗುಡಿ ಸಣ್ಣದೆಂದು ದೊಡ್ಡ ಗುಡಿಯ ದೇವರತ್ತ ನಾವು ಮುಖ ಮಾಡಿದರೆ ಅದು ನಿಷ್ಠೆಯಲ್ಲ.

ಕೆಲವರು ನಮ್ಮ ದೇವರು ಮೈ ಮೇಲೆ ಬರುತ್ತಾರೆ ಎನ್ನುತ್ತಾರೆ. ದೇವರೆಂದರೆ ಮಹಾಬಯಲು ! ಬಯಲು ಎಂದಾದರೂ ಬರುವುದು ಹೋಗುವುದು ಮಾಡುತ್ತದೆಯೇ ? ಹಾಗೆಯೇ ದೇವರು ಬರುವುದಿಲ್ಲ. ಹೋಗುವುದಿಲ್ಲ. ದೇವರು ಮೈ ಮೇಲೆ ಬರುತ್ತಾನೆ ಎನ್ನುವುದು ಒಂದು ಭಾವಾದೇಶ ಎಂದು ಹೇಳಬಹುದು ಅಷ್ಟೇ !

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಫೆಬ್ರವರಿ–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 946 | 456 | 466 | 200 | 2068 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 70 | 47 | 38 | 34 | 189 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 209 | 38 | 95 | 28 | 370 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 807 | 465 | 409 | 206 | 1887 |
| **ಫೆಬ್ರವರಿ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 189 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 370** | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7527 | 1363 | 2255 | 804 | 11949 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1084 | 257 | 551 | 204 | 2096 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6443 | 1106 | 1704 | 600 | 9853 |
| **ಫೆಬ್ರವರಿ 2026ರ ತಿಂಗಳಿನಲ್ಲಿ ಒಟ್ಟು 50 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರಿಗಾಗಿ "ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" ಹಾಗೂ ಮುಖ್ಯಕಾರ್ಯನಿರ್ವಾಹಕರು ಮತ್ತು ಹಿರಿಯ ಅಧಿಕಾರಿಗಳಿಗಾಗಿ "ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ"



**ಸಕಲೇಶಪುರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವತಿಯಿಂದ ದಿನಾಂಕ 26.02.2026 ಮತ್ತು 27.02.2026 ರಂದು ಆಯೋಜಿಸಿದ್ದ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು/ಉಪಾಧ್ಯಕ್ಷರು ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಹಾಗೂ ಮುಖ್ಯಕಾರ್ಯನಿರ್ವಾಹಕರು ಮತ್ತು ಅಧಿಕಾರಿಗಳಿಗಾಗಿ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಅದ್ವಯ ರೆಸಾರ್ಟ್ ಸಕಲೇಶಪುರ, ಇಲ್ಲಿ ಆಯೋಜಿಸಲಾಗಿದ್ದು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನಡೆಸಿಕೊಟ್ಟರು, ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಅವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ಇವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನ ಕುಮಾರ್, ಮಾನ್ಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ, ಶ್ರೀ ಸಿ. ಪಿ. ವಿಜಯ್ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ತರಬೇತಿ ವಿಭಾಗದ ಅಧಿಕಾರಿಯವರಾದ ಶ್ರೀಮತಿ ಕವಿತ ಆರ್ ಇವರು ನಡೆಸಿಕೊಟ್ಟರು.

ಕಾರ್ಯಕ್ರಮದ ಸಂಪನ್ಮೂಲಗಳ ವ್ಯಕ್ತಿಗಳಾಗಿ ಶ್ರೀ ಕೆ. ಎಸ್. ಮಹದೇವಸ್ವಾಮಿ, ನಿವೃತ್ತ ಸಹಪ್ರಧಾನ ವ್ಯವಸ್ಥಾಪಕರು, ಆರ್.ಬಿ.ಐ. ಬೆಂಗಳೂರು. ಶ್ರೀ ಮೋಹಿತ್ ಮಸ್ಕಿ, ಅಧ್ಯಕ್ಷರು, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ, ಶ್ರೀ ಎನ್ ವಿ ದರ್ಶನ್, ಅಧ್ಯಾಪಕ ಸದಸ್ಯರು ಮತ್ತು ಆಡಳಿತಾಧಿಕಾರಿಗಳು, ದಕ್ಷಿಣ ಭಾರತ ಬ್ಯಾಂಕುಗಳ ಸಿಬ್ಬಂದಿ ತರಬೇತಿ ಕಾಲೇಜು, ಬೆಂಗಳೂರು, ಶ್ರೀ ಬಿ ಜೆ ಕುಲಕರ್ಣಿ, ಪ್ರಾದೇಶಿಕ ವ್ಯವಸ್ಥಾಪಕರು (ನಿವೃತ್ತ), ಕರ್ನಾಟಕ ಗ್ರಾಮೀಣ ಬ್ಯಾಂಕ್ ಮತ್ತು ಸಲಹೆಗಾರರು, ವಿಕಾಸ್ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಹೊಸಪೇಟೆ" ಸಿಎ ಸುರೇಖಾ ಜೋಶಿ, ನಿರ್ದೇಶಕರು, COSMOS ಬ್ಯಾಂಕ್, ಪುಣೆ ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ 11 ಬ್ಯಾಂಕುಗಳಿಂದ 46 ಪ್ರತಿನಿಧಿಗಳು ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಸೇರಿ ಒಟ್ಟು 56 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ತರಬೇತಿ ವಿಭಾಗದ ಅಧಿಕಾರಿಯವರಾದ ಶ್ರೀ ಬಾಬು ಪಠಾಣ ಇವರು ನಡೆಸಿಕೊಟ್ಟರು.

# ರೂ. 10 ರಿಂದ 50 ಕೋಟಿ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಉನ್ನತ ಮಟ್ಟದ ಕಾರ್ಯಕ್ಷಮತೆ ತರಬೇತಿ ಕಾರ್ಯಾಗಾರ



**ಮೈಸೂರು ವಿಭಾಗ – ಕೊಲ್ಲೂರು :** 2026ನೇ ಸಾಲಿನಲ್ಲಿ ಮೈಸೂರು ಪ್ರಾಂತದ ಅಧಿಕ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಕರಿಗಾಗಿ ಉನ್ನತ ಮಟ್ಟದ ಕಾರ್ಯಕ್ಷಮತೆ ತರಬೇತಿ ಕಾರ್ಯಕ್ರಮವನ್ನು ದಿನಾಂಕ 19.02.2026 ಮತ್ತು 20.02.2026ರಂದು ಅಂತರ್ವನಂ ರೆಸಾರ್ಟ್ ಫಾರ್ಮ್ಸ್, ಕೊಲ್ಲೂರು ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ಜಿ. ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಾಕ್ಷರಾದ ಶ್ರೀ ಪ್ರಸನ್ನ ಕುಮಾರ್ ಎ. ಆರ್, ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್, ಮತ್ತು ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವ ಸ್ವಾಮಿ, ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಮೊದಲ ದಿನದ ಪ್ರಥಮ ಅವಧಿಯಲ್ಲಿ ಸೌಹಾರ್ದ

ಸಹಕಾರಿಯಲ್ಲಿ ಕಾಯ್ದೆ ಹಾಗೂ ಸುತ್ತೋಲೆಯ ಅಂಶಗಳನ್ನು ಅಳವಡಿಸಿಕೊಳ್ಳುವ ಮೂಲಕ ಸುಧಾರಣೆಯ ವಿವಿಧ ಹಂತಗಳು ಈ ವಿಷಯದ ಕುರಿತು ಶ್ರೀ ಮಧುಕರ್ ಹೆಗಡೆ ಇವರು ಉಪನ್ಯಾಸ ನೀಡಿದರು. ದ್ವಿತೀಯ ಅವಧಿಯಲ್ಲಿ ಸಹಕಾರಿ ಕಛೇರಿ ಆಡಳಿತ ವ್ಯವಸ್ಥೆ ಈ ವಿಷಯದ ಕುರಿತು ಶ್ರೀ ರಘುನಂದನ್ ಕೆ. ಇವರು ಹಾಗೂ ಮೂರನೇ ಅವಧಿಯಲ್ಲಿ ಸಾಮೂಹಿಕ ಚರ್ಚೆ ವಿಷಯವಾಗಿ ಸಹಕಾರಿಗಳಲ್ಲಿ ಸಂಪನ್ಮೂಲ ಕ್ರೋಢಿಕರಣ, ಸಂಪನ್ಮೂಲ ಸದ್ಬಳಕೆ ಮತ್ತು ಲಾಭದಾಯಕ ಹೂಡಿಕೆ ಎಂಬ ವಿಷಯದ ಕುರಿತು ಶ್ರೀ ಮಧುಕರ್ ಹೆಗಡೆ ಮತ್ತು ಶ್ರೀ ಅರುಣ್ ಕುಮಾರ್ ಇವರು ಮಾಹಿತಿ ನೀಡಿದರು. ನಾಲ್ಕನೇ ಅವಧಿಯಲ್ಲಿ SWOT ANALYSIS WITH ACTIVITY ಈ ವಿಷಯದ ಕುರಿತು ಶ್ರೀ ರಘುನಂದನ್ ಕೆ. ಇವರು ಉಪನ್ಯಾಸ ನೀಡಿದರು.

ನಂತರ ದಿನಾಂಕ 20.02.2026ರ ಎರಡನೇ ದಿನದ ಮೊದಲ ಅವಧಿಯಲ್ಲಿ ಆಂತರಿಕ ಸಂಬಂಧಗಳ ನಿರ್ವಹಣೆ ಈ ವಿಷಯದ ಕುರಿತು ಶ್ರೀ ಶರಣಗೌಡ ಜಿ ಪಾಟೀಲ್ ರವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಗುಣಾತ್ಮಕ ಸಾಲ ನೀಡಿಕೆ ಮತ್ತು ಸಾಲ ವಸೂಲಾತಿ ಕ್ರಮಗಳು ಈ ವಿಷಯದ ಕುರಿತು ಶ್ರೀ ರತ್ನಾಕರ ಹೆಗ್ಡೆ ರವರು ಮಾಹಿತಿಯನ್ನು ನೀಡಿದರು. ಮೂರನೇ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಎ. ಐ, ಚಾಟ್ ಜಿ.ಪಿ.ಟಿ.ಗಳ ಬಳಕೆ ಹಾಗೂ ಸೈಬರ್ ಕ್ರೈಮ್ ಈ ವಿಷಯದ ಕುರಿತು ಶ್ರೀ ಜಗದೀಶ್ ರಾಮ್ ರವರು ಉಪನ್ಯಾಸವನ್ನು ನೀಡಿದರು.

ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ. ಎಸ್ ರವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು ಮೈಸೂರು ಪ್ರಾಂತ್ಯದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಮುಖ್ಯಕಾರ್ಯನಿರ್ವಾಹಕರು ಸೇರಿ 49 ಸೌಹಾರ್ದ ಸಹಕಾರಿಗಳಿಂದ 79 ಪ್ರತಿನಿಧಿಗಳು ಭಾಗವಹಿಸಿದ್ದರು



**ಬೆಂಗಳೂರು ವಿಭಾಗ – ಸಕಲೇಶಪುರ :** ದಿನಾಂಕ 25.02.2026 ರಿಂದ ದಿನಾಂಕ 26.02.2026 ರವರೆಗೆ ಬೆಂಗಳೂರು ಪ್ರಾಂತದಲ್ಲಿ 10 ಕೋಟಿಯಿಂದ 50 ಕೋಟಿಯವರೆಗೆ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ 2 ದಿನಗಳ ಉನ್ನತ ಮಟ್ಟದ ತರಬೇತಿ ಕಾರ್ಯಗಾರವನ್ನು ಜಪ್ಪದಕಲ್ಲು ರೆಸಾರ್ಟ್, ಹುರುಡಿ ಗ್ರಾಮ, ಸಕಲೇಶಪುರ–ಮೂಡಿಗೆರೆ ರಸ್ತೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ವೇದಿಕೆಯ ಗಣ್ಯರನ್ನು ಸ್ವಾಗತಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಪ್ರಾಸ್ತಾವಿಕ ನುಡಿಯನ್ನು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಮಾಜಿ ನಿರ್ದೇಶಕರುಗಳಾದ ಶ್ರೀ ನಾಗೇಂದ್ರ ಗುಪ್ತ ರವರು, ಶ್ರೀ ಬಿ. ಗಂಗಾಧರಯ್ಯ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ಹಾಗೂ ಶ್ರೀ ನಾಗರಾಜ ಜಿ.ಹೆಚ್ ರವರು ನೆರವೇರಿಸಿದರು. ಕಾರ್ಯಗಾರದ ಮೊದಲ ದಿನದ ಅವಧಿಯಲ್ಲಿ ಸಹಕಾರ ಕ್ಷೇತ್ರದ ಇತ್ತೀಚಿನ ಬೆಳವಣಿಗೆಗಳು, ಸಂಯುಕ್ತ ಸಹಕಾರಿ ಮತ್ತು ಸೌಹಾರ್ದ ಸಹಕಾರಿಗಳ ಸಂಬಂಧ ಹಾಗೂ ಇತ್ತೀಚಿನ ಕಾಯ್ದೆ ತಿದ್ದುಪಡಿ ವಿಷಯದ ಕುರಿತು ಮಾಹಿತಿ ನೀಡಿದರು. ಎರಡನೆಯ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ಹಾಗೂ ಇತರೆ ಚಟುವಟಿಕೆಗಳ ಕುರಿತು ಡಾ. ಹರೀಶ್, ಕಾರ್ಪೊರೇಟ್ ಟ್ರೈನರ್, ಬೆಂಗಳೂರು ಇವರು ಮಾಹಿತಿ ನೀಡಿದರು. ದಿನಾಂಕ 26.02.2026ರ ಮೊದಲ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಸೈಬರ್ ಸೆಕ್ಯುರಿಟಿ ನಿರ್ವಹಣೆ ಹಾಗೂ ಎಐ ತಂತ್ರಾಂಶ ಅಳವಡಿಕೆ ವಿಷಯದ ಕುರಿತು ಡಾ. ಚೇತನ್, ತರಬೇತುದಾರರು, ಎಟಿಐ ಅಕಾಡೆಮಿ, ಮೈಸೂರು ಇವರು ಮಾಹಿತಿ ನೀಡಿದರು. ಎರಡನೆಯ ಅವಧಿಯಲ್ಲಿ ಆರ್ಥಿಕ ಶಿಸ್ತು ಹಾಗೂ ಗುಣಮಟ್ಟ ಸುಧಾರಣೆ ಹಂತಗಳು ವಿಷಯದ ಕುರಿತು ಶ್ರೀ ಮಧುಕರ ಹೆಗಡೆ, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರು ಮಾಹಿತಿ ನೀಡಿದರು. ಮೂರನೆಯ ಅವಧಿಯಲ್ಲಿ ಗುಣಮಟ್ಟದ ಸಾಲ ವಿತರಣೆಯಲ್ಲಿ ಆಡಳಿತ ಮಂಡಳಿಯವರ ಕರ್ತವ್ಯ ಮತ್ತು ಜವಾಬ್ದಾರಿ ವಿಷಯದ ಕುರಿತು ಶ್ರೀ ಐ.ಎಸ್. ಗಿರೆಡ್ಡಿ. ಮಾನ್ಯ ನಿವೃತ್ತ ಅಪರ ನಿಬಂಧಕರು, ಸಹಕಾರ ಇಲಾಖೆ ಇವರು ಮಾಹಿತಿ ನೀಡಿದರು. ನಾಲ್ಕನೆಯ ಅವಧಿಯಲ್ಲಿ ಶಾಖೆಗಳ ನಿರ್ವಹಣೆ & ನಿಯಂತ್ರಣ ಹಾಗೂ ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಕಾರ್ಯಗಳು ವಿಷಯದ ಕುರಿತು ಶ್ರೀ ಬಿ.ವಿ. ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಮಾಹಿತಿ ನೀಡಿದರು.

ದಿನಾಂಕ 26.02.2026ರ ಸಂಜೆ 4.00 ಗಂಟೆಯಿಂದ 2 ದಿನದ ಕಾರ್ಯಗಾರದ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಶ್ರೀ ಸಿ.ಪಿ. ವಿಜಯ್ ರವರು, ಶ್ರೀ ರಘುರಾಮರೆಡ್ಡಿ ರವರು ಹಾಗೂ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭಾಗವಹಿಸಿದ್ದರು. ವೇದಿಕೆಯ ಗಣ್ಯರನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ಸ್ವಾಗತಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಹಾಗೂ ಶ್ರೀ ಉಮೇಶ್ ಎ.ಎಸ್ ರವರು ನಡೆಸಿಕೊಟ್ಟರು. ಎರಡು ದಿನದ ಕಾರ್ಯಗಾರದಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಸೇರಿದಂತೆ 105 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಳಗಾವಿ ಹಾಗೂ ಕಲಬುರಗಿ ವಿಭಾಗ – ದಾಂಡೇಲಿ :** ದಿನಾಂಕ 27.02.2026 ಮತ್ತು 28.02.2026 ರಂದು ಬೆಳಗಾವಿ ಮತ್ತು ಕಲಬುರಗಿ ಪ್ರಾಂತದ 10 ಕೋಟಿಯಿಂದ 50 ಕೋಟಿಯವರೆಗೆ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಎರಡು ದಿನಗಳ ಉನ್ನತ ಮಟ್ಟದ ತರಬೇತಿಯನ್ನು, ದಾಂಡೇಲಿಯ ಮನೋಮಯ ರೆಸಾರ್ಟ್ ನಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ನೆರವೇರಿಸಿದರು. ವೇದಿಕೆ ಮೇಲೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಡಾ ಎಸ್.ಎ.ಸಿದ್ಧಾಂತಿ, ಶ್ರೀ ಪಾಂಡುರಂಗ ಹಾಗೂ ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಇವರು ಉಪಸ್ಥಿತರಿದ್ದರು.

ವೇದಿಕೆಯಲ್ಲಿದ್ದ ಗಣ್ಯರಿಗೆ ಸಂಯುಕ್ತ ಸಹಕಾರಿಯ ಅಧಿಕಾರಿಗಳಾದ ಶ್ರೀ ವೃಷಭನಾಥ ಪರಪ್ಪನವರ ರವರು ಸ್ವಾಗತ ಕೋರಿದರು. ಶ್ರೀಮತಿ ರೇಷ್ಮಾ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶೆಟ್ಟಿ ಇವರು ವಂದಿಸಿದರು.

ತರಬೇತಿಯ ಮೊದಲನೇ ದಿನ ಸಹಕಾರಿಗಳ ಅಧ್ಯಕ್ಷರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಏರ್ಪಡಿಸಿದ ಜಂಟಿ ಅವಧಿಯಲ್ಲಿ ಸಹಕಾರ ಕ್ಷೇತ್ರದ ಇತ್ತೀಚಿನ ವಿಷಯಗಳ ಕುರಿತು ಡಾ ಎಸ್.ಎ.ಸಿದ್ಧಾಂತಿ, ಮಾನ್ಯ ಪ್ರಾದೇಶಿಕ ನಿರ್ದೇಶಕರು (ನಿ) ಬೆಂಗಳೂರು ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಸಹಕಾರಿಯ ಅಧ್ಯಕ್ಷರಿಗೆ ಸಹಕಾರ ಆಡಳಿತ ವಿಷಯದ ಕುರಿತು ಶ್ರೀ ಶಶಿಧರ್ ಎಲೆ, ಮಾನ್ಯ ಅಪರ ನಿಬಂಧಕರು (ನಿ) ಇವರು ಉಪನ್ಯಾಸ ನೀಡಿದರು. ಸಹಕಾರಿಗಳ ಮುಖ್ಯಕಾರ್ಯನಿರ್ವಹಕ–ರಿಗಾಗಿ ಸೈಬರ್ ಸೆಕ್ಯುರಿಟಿ ವಿಷಯದ ಕುರಿತು ಶ್ರೀ ಎಸ್.ಜಿ.ಕುಲಕರ್ಣಿ, ಮಾನ್ಯ ಬ್ಯಾಂಕಿಂಗ್ ತಜ್ಞರು ಇವರು ಉಪನ್ಯಾಸ ನೀಡಿದರು. ಮಧ್ಯಾಹ್ನದ ಜಂಟಿ ಅವಧಿಯಲ್ಲಿ ಸಹಕಾರ ಕ್ಷೇತ್ರದ, ಅನಾಲಿಸಿಸ್ ವಿಷಯದ ಕುರಿತು ಶ್ರೀ ಶಶಿಧರ್ ಎಲೆ , ಮಾನ್ಯ ಅಪರ ನಿಬಂಧಕರು (ನಿ) ಇವರು ಉಪನ್ಯಾಸ ನೀಡಿದರು. ಕೊನೆಯ ಅವಧಿಯಲ್ಲಿ ಶ್ರೀ ಪಾಂಡುರಂಗ ಇವರು ಆಡಳಿತ ಪರಿಣಿತಿ ಆಟಗಳನ್ನು ಆಡಿಸಿದರು.

ದಿನಾಂಕ 28.02.2026 ರ ಮೊದಲ ಅವಧಿಯಲ್ಲಿ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರಿಗೆ ಆರ್ಥಿಕ ಶಿಸ್ತು ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿ ಗಳಾದ ಶ್ರೀ ರಘುನಂದನ ಕೆ ಇವರು ಉಪನ್ಯಾಸ ನೀಡಿದರು. ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ರಿಸ್ಕ್ ಮ್ಯಾನೇಜೆಂಟ್ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಜಿ.ಕುಲಕರ್ಣಿ ಇವರು ಉಪನ್ಯಾಸ ನೀಡಿದರು.

ತರಬೇತಿಯ ಸಮಾರೋಪ ಸಮಾರಂಭ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ಇವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪ, ಕಲಬುರಗಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಎಸ್. ಪಾಟೀಲ ಹಾಗೂ ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ವೇದಿಕೆ ಮೆಲೆ ಉಪಸ್ಥಿತರಿದ್ದರು. ವೇದಿಕೆಯಲ್ಲಿದ್ದ ಗಣ್ಯರಿಗೆ ಪ್ರಾಂತೀಯ ವ್ಯವಸ್ಥಾಪಕರಾಧ ಶ್ರೀ ಸೂರ್ಯಕಾಂತ ರ್‍ಯಾಕಲೆ ಇವರು ಸ್ವಾಗತ ಕೋರಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಇವರು ವಂದಿಸಿದರು. ತರಬೇತಿಯಲ್ಲಿ 218 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಫೆಬ್ರವರಿ 2026 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

### 1. ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಿನ್ನಲೆಯಲ್ಲಿ ಫೆಬ್ರವರಿ ಮಾಹೆಯಲ್ಲಿ 1) ಕೆ.ಆರ್.ಎಸ್. ಸೌಹಾರ್ದ ಕೋ–ಆಪರೇಟಿವ್ ಲಿ., ತುಮಕೂರು. 2) ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ. ವಿಜಯಪುರ. 3) ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ನಿ. ಹಾನಗಲ್ (ಮಾರ್ಪಾಡು ಆದೇಶ) 4) ಅಮೂಲ್ಯ ಸೌಹಾರ್ದ ಸಹಕಾರಿ ನಿ., ಶಿರಸಿ. ಒಟ್ಟು 04 ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಸೌಹಾರ್ದ ಕಾಯ್ದೆ 1997ರ ಕಲಂ 38ಎ ರನ್ವಯ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.



## ಸಂಯುಕ್ತ ಸಹಕಾರಿಯ ಕೆಲಸ ಕಾರ್ಯದಿಂದ ಬಿಡುಗಡೆ

ಶ್ರೀ ವೆಂಕಟೇಶ ರಾಥೋಡ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬಾಗಲಕೋಟೆ ಇವರನ್ನು ದಿನಾಂಕ 20.02.2026 ರಂದು ಸಂಯುಕ್ತ ಸಹಕಾರಿ ಸೇವೆಯಿಂದ ಬಿಡುಗಡೆ ಮಾಡಲಾಗಿದೆ.

# ಪತ್ತೇತ್ತರ ಸೌಹಾರ್ದ ಸಹಕಾರಿಗಳಿಗೆ ವಿಶೇಷ ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವತಿಯಿಂದ ದಿನಾಂಕ 09.02.2026 ರಂದು ರಾಜ್ಯದ ಪತ್ತೇತರ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯ ಕಾರ್ಯನಿರ್ವಣಾಧಿಕಾರಿಗಳಿಗಾಗಿ ಒಂದು ದಿನದ ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮಮವನ್ನು ಆಯೋಜಿಸಲಾಗಿತ್ತು. ಶ್ರೀಮತಿ ದಿವ್ಯ ಟಿ ಇವರು ಪ್ರಾರ್ಥನೆಯನ್ನು ನೆರವೇರಿಸಿದರು. ಕಾರ್ಯಕ್ರಮದ ಸ್ವಾಗತ ಭಾಷಣವನ್ನು ತರಬೇತಿ ವಿಭಾಗದ ಅಧಿಕಾರಿಯವರಾದ ಶ್ರೀಮತಿ ಕವಿತ ಆರ್ ಇವರು ನಡೆಸಿಕೊಟ್ಟರು.

**ರಾಜ್ಯದ ಸೌಹಾರ್ದ ಸಹಕಾರಿಗಳು ಪತ್ತೇತರ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಿ : ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಇವರು ರಾಜ್ಯದ ಪತ್ತೇತರ ಸೌಹಾರ್ದ ಸಹಕಾರಿಗಳಿಗಾಗಿ ಪ್ರಥಮ ಬಾರಿಗೆ ಈ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಪತ್ತೇತರ ಸೌಹಾರ್ದ ಸಹಕಾ–ರಿಗಳು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಪತ್ತೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ರಾಜ್ಯದಲ್ಲಿ ಮಾದರಿಯಾಗಬೇಕೆಂದು ತಿಳಿಸಿದ್ದರು.

**ಬದಲಾವಣೆಗೆ ಹೊಂದಿಕೊಳ್ಳುವುದು ಅಗತ್ಯ : ಶ್ರೀ ವೆಂಕಟೇಶ್ ಎನ್:, ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ**

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ, ಮಾತನಾಡಿದ ಇವರು ಸ್ಪರ್ಧಾತ್ಮಕ ಯುಗದಲ್ಲಿ ಸಹಕಾರಿಗಳು ಹೊಂದಾಣಿಕೆ ಮಾಡಿಕೊಂಡು ತಮ್ಮ ವ್ಯವಹಾರ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವುದು ಹಾಗೂ ರೈತರಿಗೆ ಅನುಕೂಲವಾಗುವಂತ ಸೇವೆಗಳನ್ನು ತಮ್ಮ ಸೌಹಾರ್ದ ಸಂಸ್ಥೆಗಳಲ್ಲಿ ಅಳವಡಿಸಿಕೊಳ್ಳಲು ತಿಳಿಸಿದರು.

**ಸದಸ್ಯರ ಉತ್ಪಾದಿತ ವಸ್ತುಗಳ ಸಂಗ್ರಹ ಹಾಗೂ ಮಾರಾಟ ಪತ್ತೇತರ ಸಹಕಾರಿಗಳು ಕೇಂದ್ರಿಕೃತವಾಗಿರಬೇಕು : ಶ್ರೀ ಜಿ. ನಂಜನಗೌಡ: ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಇವರು ಸೌಹಾರ್ದ ಸಹಕಾರಿಗಳು ಕೇವಲ ಠೇವಣಿ ಸಂಗ್ರಹ ಸಾಲ ಕೊಡುವುದು ಮತ್ತು ಸಾಲ ವಸೂಲಿ ಅಷ್ಟೆ ನಾವು ಕಾಣುತ್ತೇವೆ. ಆದರೆ ಈ ಪತ್ತೇತರ ಚಟುವಟಿಕೆಗಳು ಮಾಡುವಂತ ಸೌಹಾರ್ದ ಸಹಕಾರಿಗಳು ಬಹಳ ವಿರಳವಾಗಿದೆ. ಮುಂದಿನ ದಿನಗಳಲ್ಲಿ ಪತ್ತೇತರ ಕಾರ್ಯ ಚಟುವಟಿಗಳು ನಿರ್ವಹಿಸುವಂತ ಸಹಕಾರಿಗಳ ಸಂಖ್ಯೆಗಳು ಹೆಚ್ಚಾಗಬೇಕು. ರೈತರಿಗೆ ಅನುಕೂಲವಾಗುವಂತ ಕಾರ್ಯ ಚಟುವಟಿಕೆಗಳು ನಿರ್ವಹಿಸಬೇಕು. ಈ ರೀತಿ ಹೊಸ–ಹೊಸ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುವುದರ ಜೊತೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಬಗ್ಗೆ ಜನರಿಗೆ ತಲುಪುವಂತೆ ಮಾಡಬೇಕು ಎಂದು ತಿಳಿಸಿದರು.

**ಪತ್ತೇತರ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ತರಬೇತಿ : ಶ್ರೀ ಎ ಆರ್ ಪ್ರಸನ್ನ ಕುಮಾರ್, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಪತ್ತೇತರ ಸೌಹಾರ್ದ ಸಹಕಾರಿಗಳು ಒಂದೇ ಕಡೆಗೆ ಸೀಮಿತವಾಗದೆ ಬೇರೆ ಬೇರೆ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ರೈತರು ಬೆಳೆದಿರುವ ಬೆಳೆಗಳಿಗೆ ಬೆಂಬಲ ನೀಡಬೇಕು. ಪತ್ತೇತರ ಸೌಹಾರ್ದ ಸಹಕಾರಿಗಳಿಗೆ ಮುಂದಿನ ದಿನಗಳಲ್ಲಿ ಹೆಚ್ಚಿನ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

**ಸೇವಾ ವಿಭಾಗಗಳಲ್ಲಿ ಅನ್ವೇಷಣೆ ಹಾಗೂ ವಿಸ್ತರಣೆ ಇಂದಿನ ಅವಶ್ಯಕತೆ : ಡಾ. ಹೆಚ್. ವಿ ರಾಜೀವ್, ಮಾನ್ಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಸೌಹಾರ್ದ ಸಹಕಾರಿಗಳು ತಮ್ಮ ಕಾರ್ಯ ಚಟುವಟಿಕೆಗಳು ಸೈಬರ್ ಕ್ರೈಂ ಬಗ್ಗೆ ಬಹಳ ಎಚ್ಚರಿಕೆಗಳಿಂದ ಕಾರ್ಯ ನಿರ್ವಹಿಸಬೇಕು. ಸೈಬರ್ ಕ್ರೈಂ ಬಗ್ಗೆ ರೈತರಿಗೆ, ವೃದ್ಧರಿಗೆ ಹಾಗೂ ಅನಕ್ಷರಸ್ಥರಿಗೆ ಸರಿಯಾದ ತಿಳುವಳಿಕೆ ಹಾಗೂ ಮಾಹಿತಿಯನ್ನು ನೀಡಬೇಕು ಎಂದು ಹೇಳಿದರು.

ಮುಖ್ಯ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕಿ ಯಾದ ಶ್ರೀಮತಿ ಶೈಲಜಾ ತಪಲಿ, ಶ್ರೀ ಕಾರ್ತಿಕಯ್ಯ ಮಾನ್ಯ ನಿರ್ದೇಶಕರು ಆರ್.ಐ.ಸಿ ಬೆಂಗಳೂರು ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗುರುಸ್ವಾಮಿ ಹಾಗೂ ಶ್ರೀ ಹೆಚ್ ಎಸ್ ನಾಗರಾಜಯ್ಯ ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ) ಬೆಂಗಳೂರು ಇವರು ಉಪಸ್ಥಿತರಿದ್ದರು.

ಈ ತರಬೇತಿಯಲ್ಲಿ ಕಾರ್ಯಕ್ರಮದಲ್ಲಿ ಚರ್ಚಾಗೊಷ್ಠಿಯನ್ನು ಏರ್ಪಡಿಸಲಾಯಿತ್ತು. ಈ ಚರ್ಚಾಗೊಷ್ಠಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎ. ಆರ್. ಪ್ರಸನ್ನ ಕುಮಾರ, ಮಾನ್ಯ ಉಪಾಧ್ಯಕ್ಷರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ವಹಿಸಿದದರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಹೆಚ್.ಎಂ. ರಾಘವೇಂದ್ರ, ಮಾನ್ಯ ಅಧ್ಯಕ್ಷರು, ಕೊಡಚಾದ್ರಿ ಅಡಿಕೆ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ. ಶ್ರೀ ಮಲ್ಲಿಕಾರ್ಜನಯ್ಯ ಮಾನ್ಯ ಅಧ್ಯಕ್ಷರು ಗುರುಕುಲ ಸೌಹಾರ್ದ ಸಹಕಾರಿ ನಿ., ತುಮಕೂರು. ಶ್ರೀ

ಶಂಭುಲಿಂಗ ಹೆಗಡೆ ಮಾನ್ಯ ಅಧ್ಯಕ್ಷರು ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ,. ಶಿರಸಿ. ಶ್ರೀ ಗವಿಸಿದ್ದಯ್ಯ ಮಾನ್ಯ ಅಧ್ಯಕ್ಷರು, ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ,. ಕೊಪ್ಪಳ. ಶ್ರೀ ವಿಶ್ವನಾಥ ಹೆಗಡೆ ಮಾನ್ಯ ಅಧ್ಯಕ್ಷರು ಕುಮಟಾ ಅಡಿಕೆ ಮಾರಾಟ ಸಹಕಾರಿ ಸಂಘ, ಕುಮಟಾ.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನ ಕುಮಾರ್ ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕಿಯಾದ ಶ್ರೀಮತಿ ಶೈಲಜಾ ತಪಲಿ ಭಾಗವಹಿಸಿದ್ದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 13 ಜಿಲ್ಲೆಯಿಂದ 24 ಸೌಹಾರ್ದ ಸಹಕಾರಿಗಳಿಂದ 34 ಪತಿನಿಧಿಗಳು ಭಾಗವಹಿಸಿದ್ದರು. ತರಬೇತಿ ಕಾರ್ಯಕ್ರಮದ ವಂದನಾರ್ಪಣೆಯನ್ನು ತರಬೇತಿ ವಿಭಾಗದ ಅಧಿಕಾರಿಯವರಾದ ಶ್ರೀ ಬಾಬು ಪಠಾಣ ಇವರು ನಡೆಸಿಕೊಟ್ಟರು.



**ಕಲಬುರಗಿ :** ದಿನಾಂಕ 20.02.2026 ರಂದು ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ವ್ಯವಹಾರ ಅಭಿವೃದ್ದಿ ತರಬೇತಿಯನ್ನು ಪ್ರಾಂತೀಯ ಕಛೇರಿ ಕಲಬುರಗಿ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ವೇದಿಕೆಯ ಮೇಲೆ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ. ಸಂಪನ್ಮೂಲ ವ್ಯಕ್ತಿಗಳಾದ ಮಾನ್ಯ ನಿವೃತ್ತ ಅಪರ ನಿಬಂಧಕರಾದ ಶ್ರೀ ಶಶಿಧರ ಎಲೆ, ಮತ್ತು ಶ್ರೀ ಹೆಚ್. ಎಸ್. ನಾಗರಾಜಯ್ಯರವರು ಉಪಸ್ಥಿತರಿದ್ದರು. ಮೊದಲನೆಯ ಅವಧಿಯಲ್ಲಿ ಸಹಕಾರಿಯಲ್ಲಿ ನಿಧಿಗಳ ನಿರ್ವಹಣೆ, ಲಾಭದಾಯಕತೆಯ ಕುರಿತು ಮಾನ್ಯ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಶಶಿಧರ ಎಲೆಯವರು ಉಪನ್ಯಾಸ ನೀಡಿದರು.

ಮಧ್ಯಾಹ್ನದ ಅವಧಿಯಲ್ಲಿ ಸಹಕಾರಿಗಳ ಆಡಳಿತ ನಿರ್ವಹಣೆಯ ಕುರಿತು ಮಾನ್ಯ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಹೆಚ್. ಎಸ್ ನಾಗರಾಜಯ್ಯರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ಸ್ವಾಗತ ಮತ್ತು ನಿರೂಪಣೆಯನ್ನು ಕಲಬುರಗಿ ಜಿಲ್ಲಾ ಸೌಹಾರ್ದ ಅಭಿವೃದ್ದಿ ಅಧಿಕಾರಿಗಳಾದ ಶ್ರೀ ಶಿವಕಾಂತ ರವರು ನೆರವೆರಸಿದರು. ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಂದ 104 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೀದರ :** ದಿನಾಂಕ 21.02.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಕೆಲವು ಆಯ್ದ (ನಷ್ಟದಲ್ಲಿರುವ ಮತ್ತು 1 ಕೋಟಿ ಒಳಗೆ ದುಡಿಯುವ ಬಂಡವಾಳ ಹೊಂದಿರುವ) ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಸಾಮರ್ಥ್ಯ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ಉದ್ಘಾಟಿಸಿ ಸಹಕಾರಿಯು ಲಾಭದಾಯಕತೆವಾಗಬೇಕಾದರೆ ದುಂದು ವೆಚ್ಚಕ್ಕೆ ಕಡಿವಾಣ, ಪಾರದರ್ಶಕತೆ ಹಾಗೂ ಆಡಳಿತ ಮಂಡಳಿಯ ದಿನನಿತ್ಯದ ವ್ಯವಹಾರದ ಕುರಿತು ಗಮನ ಹರಿಸಬೇಕು ಈ ಕುರಿತು ಹಲವು ನಿರ್ದೇಶನಗಳು ನೀಡಿ ಸಮಸ್ಯೆಗಳಿಗೆ ಬಲಿಯಾಗಬೇಡಿ ಎಂದು ಮುನ್ನಚ್ಚೆರಿಕೆ ನೀಡಿದರು. ಗುಣಾತ್ಮಕ ಸಹಕಾರಿಗಳಿಂದ ಮಾತ್ರ ಸದೃಢ ಮತ್ತು ಸಮರ್ಥ ಭಾರತದ ಅಭಿವೃದ್ದಿ ಸಾಧ್ಯ ಹಾಗೂ ಗುಣಾತ್ಮಕ ಸಹಕಾರಿಗಳು ದೇಶದ ಆರ್ಥಿಕತೆ ಮೆಟ್ಟಿಲು ಎಂದು ಸಂದೇಶ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ನಾಗಶೆಟ್ಟಿ ಪಾಟೀಲ, ನಿರ್ದೇಶಕರು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಬೀದರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸಂಜಯ ಕ್ಯಾಸ ನಿರ್ದೇಶಕರು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಸಂಪನ್ಮೂಲ ವ್ಯಕ್ತಿ ಶ್ರೀ ಶಶಿಧರ ಎಲೆ, (ನಿವೃತ್ತ) ಸಹಕಾರ ಸಂಘಗಳ ಅಪರ ನಿಬಂಧಕರು, ಮತ್ತು ಡಾ॥ ಪೃದ್ವಿರಾಜ್ ಲಕ್ಕಿಯವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸ್ವಾಗತವನ್ನು ಶ್ರೀ ಶ್ರೀಕಾಂತ ಸ್ವಾಮಿ, ನಿರೂಪಣೆಯನ್ನು ಸೌಹಾರ್ದ ಅಭಿವೃದ್ದಿ ಅಧಿಕಾರಿ ರಾಜೇಶ ರವರು ನಿರೂಪಿಸಿದರು.

ಮೊದಲನೆಯ ಅವಧಿಯಲ್ಲಿ ಶ್ರೀ ಶಶಿಧರ ಎಲೆಯವರು ವ್ಯವಹಾರ ಅಭಿವೃದ್ದಿಗೆ ಮಾರ್ಗೋಪಾಯಗಳು, ಸಂಪನ್ಮೂಲಗಳ ಸದ್ಬಳಕೆ, ವ್ಯವಹಾರ ಗಾತ್ರ ಹೆಚ್ಚಳ ಮತ್ತು ತಂತ್ರಜ್ಞಾನ ಬಳಕೆ ಬಗ್ಗೆ ಸಹಕಾರಿಗಳಿಗೆ ಉಪನ್ಯಾಸ ನೀಡಿದರು.

ಎರಡನೆಯ ಅವಧಿಯಲ್ಲಿ ಡಾ॥ ಪೃದ್ವಿರಾಜ್ ಲಕ್ಕಿ ಯವರು ರಾಷ್ಟ್ರೀಯ ತರಬೇತುದಾರರು ಸಹಕಾರಿಗಳಲ್ಲಿ ಪ್ರೇರಣಾತ್ಮಕ ವಾತಾವರಣ ಅಗತ್ಯದ ಕುರಿತು ಉಪನ್ಯಾಸ ನೀಡಿದರು. 32 ಸೌಹಾರ್ದ ಸಹಕಾರಿಗಳಿಂದ 58 ಸಹಕಾರಿಗಳ ಪ್ರತಿನಿಧಿಗಳು ಪ್ರಯೋಜನೆ ಪಡೆದರು.

# ಸಿ.ಎಸ್.ಸಿ ಕೇಂದ್ರಗಳ ಮೂಲಕ ನೀಡಬಹುದಾದ ಸೇವೆಗಳ ಕುರಿತು ತರಬೇತಿ ಕಾರ್ಯಕ್ರಮ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಕೇಂದ್ರ ಕಛೇರಿಯಲ್ಲಿ 10.02.2026ರ ಮಂಗಳವಾರದಂದು ಮೈಸೂರು ವಿಭಾಗ (ಮಂಗಳೂರು ಮತ್ತು ಉಡುಪಿ ಜಿಲ್ಲೆ ಹೊರತುಪಡಿಸಿ) ಮತ್ತು ಬೆಂಗಳೂರು ವಿಭಾಗದ ಎಲ್ಲ ಜಿಲ್ಲೆಗಳ ಸಿ.ಎಸ್.ಸಿ ಕೇಂದ್ರ ಹೊಂದಿರುವ ಸೌಹಾರ್ದ ಸಹಕಾರಿಗಳಿಗಾಗಿ ಸಿ.ಎಸ್.ಸಿ ಕೇಂದ್ರಗಳ ಮೂಲಕ ನೀಡಬಹುದಾದ ಸೇವೆಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ಹಾಗೂ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿ.ಎಸ್.ಸಿ ರಾಜ್ಯ ಉಸ್ತುವಾರಿಯವರಾದ ಶ್ರೀ ರಜತ್ ರವರು ಹಾಗೂ ಸಿ.ಎಸ್.ಸಿ ಅಧಿಕಾರಿಯವರುಗಳು ನೆರವೇರಿಸಿದರು.

ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು e-stamp ನೋಡಲ್ ಅಧಿಕಾರಿ ಹಾಗೂ ಸಿ.ಎಸ್.ಸಿ ಉಸ್ತುವಾರಿ ಅಧಿಕಾರಿ ರಾಜೇಂದ್ರ ರಾವ್ ಶಿಂಧೆ ನಡೆಸಿಕೊಟ್ಟರು. ಕಾರ್ಯಕ್ರಮದ ಉದ್ಘಾಟನಾ ಭಾಷಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಇವರು ನಡೆಸಿಕೊಟ್ಟರು.

ತರಬೇತಿಯ ನಿರೂಪಣೆಯನ್ನು ಸಂಯುಕ್ತ ಸಹಕಾರಿಯ ಅಧಿಕಾರಿ ಶ್ರೀಮತಿ ಕವಿತಾ ಇವರು ನಡೆಸಿಕೊಟ್ಟರು, ಪ್ರಾರ್ಥನೆಯನ್ನು ಸಂಯುಕ್ತ ಸಹಕಾರಿಯ ಸಹಾಯಕಿಯವರಾದ ಶ್ರೀಮತಿ ವಿಜಯಶ್ರೀ ಇವರು ನಡೆಸಿಕೊಟ್ಟರು, ಅತಿಥಿ ಗಣ್ಯರ ಸ್ವಾಗತವನ್ನು ಸಂಯುಕ್ತ ಸಹಕಾ–ರಿಯ ಹಿರಿಯ ಸಹಾಯಕರಾದ ಶ್ರೀ ವಿನೋದ್ ಇವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಶ್ರೀ ಬಾಬು ಪಠಾನ್ ತರಬೇತಿ ಅಧಿಕಾರಿ ಇವರು ನಡೆಸಿಕೊಟ್ಟರು.

ಸದರಿ ತರಬೇತಿಯಲ್ಲಿ ಮೊದಲ ಅವಧಿ ಉಪನ್ಯಾಸಕರಾಗಿ ಸಿಎಸ್‌ಸಿ ಅಧಿಕಾರಿಯವರಾದ ಶ್ರೀ ಲೀಲೇಶ್ ಇವರು telelaw ಕುರಿತ ಉಪನ್ಯಾಸವನ್ನು ನೀಡಿದರು. ಎರಡನೆಯ ಅವಧಿಯನ್ನು ಸಿಎಸ್‌ಸಿ ಅಧಿಕಾರಿಯವರಾದ ಶ್ರೀ ಸಂಜಯ್ ಇವರು ಗ್ರಾಮೀಣ ಈ ಸ್ಟೋರ್ ಮತ್ತು ಪ್ರಯಾಣ ಇದರ ಕುರಿತು ತರಬೇತಿಯನ್ನು ನೀಡಿದರು. ಮೂರನೆಯ ಅವಧಿಯನ್ನು ಸಿಎಸ್‌ಸಿ ಅಧಿಕಾರಿಯವರಾದ ಶ್ರೀಮತಿ ಪ್ರತಿಕ್ಷ ಇವರು ಡಿಜಿಪೇ ಕುರಿತು ಉಪನ್ಯಾಸವನ್ನು ನೀಡಿದರು. ನಾಲ್ಕನೆಯ ಅವಧಿಯನ್ನು ಸಿಎಸ್‌ಸಿ ಅಧಿಕಾರಿಯವರಾದ ಶ್ರೀ ಪ್ರಜ್ವಲ್ ಇವರು ಶಿಕ್ಷಣ ಹಾಗೂ ವಿಮೆ ಕುರಿತು ಉಪನ್ಯಾಸ ನೀಡಿದರು. ಐದನೆಯ ಅವಧಿಯನ್ನು ಮತ್ತೊಬ್ಬ ಸಿಎಸ್‌ಸಿ ಅಧಿಕಾರಿಯವರಾದ ಶ್ರೀ ನಾಗರಾಜ್ ಇವರು ಬಿವಿಪಿಎಸ್ ಹಾಗೂ ರಿಚಾರ್ಜ್ ಇದರ ಕುರಿತು ಉಪನ್ಯಾಸವನ್ನು ನೀಡಿದರು.ಈ ಕಾರ್ಯಕ್ರಮದಲ್ಲಿ 43 ಸೌಹಾರ್ದ ಸಹಕಾರಿಗಳಿಂದ 55 ಸಿಬ್ಬಂದಿಗಳು ಭಾಗವಹಿಸಿದ್ದರು.



**ಬೆಳಗಾವಿ :** ದಿನಾಂಕ 17.02.2026 ರಂದು ಸಿಎಸ್‌ಸಿ ಕೇಂದ್ರಗಳ ಮೂಲಕ ನೀಡಬಹುದಾದ ಸೇವೆಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತಿಯ ಕಚೇರಿಯಲ್ಲಿ ಬೆಳಗಾವಿ ಪ್ರಾಂತದ ಸಿ.ಎಸ್.ಸಿ ಕೇಂದ್ರ ಹೊಂದಿರುವ ಹಾಗೂ ಸಿ.ಎಸ್.ಸಿ ಕೇಂದ್ರ ಪ್ರಾರಂಭಿಸಲು ಆಸಕ್ತಿ ಹೊಂದಿರುವ ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸಲಾಗಿತ್ತು.

ಸದರಿ ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು ಹಾಗೂ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು.

ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ಇ–ಸ್ಟ್ಯಾಂಪ್ ನೋಡಲ್ ಅಧಿಕಾರಿ ಹಾಗೂ ಸಿ.ಎಸ್.ಸಿ ಉಸ್ತುವಾರಿ ಅಧಿಕಾರಿ ರಾಜೇಂದ್ರ ರಾವ್ ಶಿಂಧೆ ನಡೆಸಿಕೊಟ್ಟರು. ತರಬೇತಿಯ ನಿರೂಪಣೆಯನ್ನು ಶ್ರೀ ರಾಚಯ್ಯ ಹಿರೇಮಠ, ಹಿರಿಯ ಸಹಾಯಕ, ಇವರು ನಡೆಸಿಕೊಟ್ಟರು. ಸದರಿ ತರಬೇತಿಯಲ್ಲಿ ಸಿಎಸ್‌ಸಿ ಅಧಿಕಾರಿಯವರಾದ ಶ್ರೀ ಕಿರಣ್ ಜೋಶಿ ಇವರು ಟೆಲಿಲಾ, ಶಿಕ್ಷಣ ಹಾಗೂ ಗ್ರಾಮೀಣ ಈ ಸ್ಟೋರ್ ಮತ್ತು ಪ್ರಯಾಣ ಇದರ ಕುರಿತು ತರಬೇತಿಯನ್ನು ನೀಡಿದರು. ನಂತರದ ಅವಧಿಯಲ್ಲಿ ಪ್ರಯಾಣದ ಕುರಿತು ಸಿಎಸ್‌ಸಿ ಅಧಿಕಾರಿಯವರಾದ ಇಬ್ರಾಹಿಂ ನಡೆಸಿಕೊಟ್ಟರು. ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಮಲ್ಲಿಕಾರ್ಜುನ್ ಬೆಳಗಾವಿ ಜಿಲ್ಲಾ ಸಿಎಸ್ ಸಿ, ವ್ಯವಸ್ಥಾಪಕರು, ಇವರು ಬಿಬಿಪಿಎಸ್ ಹಾಗೂ ವಿಮಾ (ಎಸ್.ಬಿ.ಐ ಮತ್ತು ಎಚ್.ಡಿ.ಎಫ್.ಸಿ ಪಾಲುದಾರರ ಉಪಸ್ಥಿತಿಯಲ್ಲಿ) ಸೇವೆಗಳ ಬಗ್ಗೆ ಮಾಹಿತಿ ನೀಡಿದರು. ನಂತರ ಶ್ರೀ ಅಬ್ದುಲ್ ರಜಾಕ್ ಇವರು ಬೆಳಗಾವಿ ಜಿಲ್ಲೆಯ ಸ್ಟಾರ್ ವಿಎಲ್‌ಇ ಆಗಿದ್ದು ಇವರು ಒಂದು ಸಿಎಸ್‌ಸಿ ಕೇಂದ್ರದಿಂದ ನೀಡಬಹುದಾದ ಸೇವೆಗಳು ಹಾಗೂ ಅದರಿಂದ ಅವರು ಪಡೆಯುತ್ತಿರುವ ಕಮಿಷನ್ ಗಳಿಕೆಯ ಬಗ್ಗೆ ಮಾಹಿತಿ ನೀಡಿದರು. ತರಬೇತಿಯಲ್ಲಿ 52 ಸಹಕಾರಿಗಳಿಂದ 78 ಪ್ರತಿನಿಧಿಗಳು ಭಾಗವಹಿಸಿದ್ದರು.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮ




**ದಕ್ಷಿಣ ಕನ್ನಡ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಮೈಸೂರು ಪ್ರಾಂತಿಯ ಕಛೇರಿಯ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ, ಬಂಟ್ವಾಳ, ಕಡಬ ಮತ್ತು ಬೆಳ್ತಂಗಡಿ ತಾಲ್ಲೂಕು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರಿಗಾಗಿ "ವಿಷಯಾಧಾರಿತ ತರಬೇತಿ ಕಾರ್ಯಕ್ರಮ"ವನ್ನು ದಿನಾಂಕ 09.02.2026ರ ಬೆಳಿಗ್ಗೆ 10.00 ಗಂಟೆಗೆ ಸರ್ ಎಂ. ವಿಶ್ವೇಶ್ವರಯ್ಯ ಸಭಾಭವನ, ಮಾಸ್ಟರ್ ಪ್ಲಾನರಿ ವಠಾರ, ನೆಹರು ನಗರ, ಪುತ್ತೂರು, ದಕ್ಷಿಣ ಕನ್ನಡ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಮಂಜುನಾಥ ಎಸ್. ಕೆ. ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಇವರು ನೆರವೇ–ರಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಭಾರತಿ ಜಿ. ಭಟ್ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ನೆರವೇರಿಸಿದರು, ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ಮಾಜಿ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಇವರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ.ಎಸ್. ರವರು ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂದನ್ ಬಿ.ಎನ್. ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ "ಸೌಹಾರ್ದ ಸಹಕಾರಿ ಬೆಳವಣಿಗೆಯಿಂದ ನಾಯಕತ್ವ ಬೆಳವಣಿಗೆಗೆ ಇರುವ ಅವಕಾಶಗಳು" ಈ ವಿಷಯದ ಕುರಿತು ತರಬೇತಿಯನ್ನು ಮಾನ್ಯ ಸಂಯುಕ್ತ ಸಹಕಾರಿಯ ನಿರ್ದೇಶರಾದ ಶ್ರೀ ಮಂಜುನಾಥ ಎಸ್.ಕೆ ಇವರು ಉಪನ್ಯಾಸ ನೀಡಿದರು. ದ್ವಿತೀಯ ಅವಧಿಯಲ್ಲಿ "ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು" ಈ ವಿಷಯದ ಕುರಿತು ಉಪನ್ಯಾಸವನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಮೂರನೇ ಅವಧಿಯಲ್ಲಿ "ಸೌಹಾರ್ದ ಕಾಯ್ದೆಯ ಅನುಗುಣವಾಗಿ ಆಡಳಿತ ಸದಸ್ಯರ ಅಧಿಕಾರ ಮತ್ತು ಪ್ರಕಾರ್ಯಗಳು" ಈ ವಿಷಯದ ಕುರಿತು ಉಪನ್ಯಾಸವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ.ಎಸ್. ಇವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಒಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಅಯ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಸೇರಿ 35 ಸೌಹಾರ್ದ ಸಹಕಾರಿಗಳಿಂದ 97 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.




**ಉಡುಪಿ** : ದಿನಾಂಕ 12.02.2026 ರಂದು ಬೆಳಿಗ್ಗೆ 10.00 ಘಂಟೆಗೆ ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಬೈಂದೂರು ತಾಲ್ಲೂಕು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಪ್ರೆಸ್ಟಿಜ್ ಸಭಾಂಗಣ ತ್ರಾಸಿ, ಉಡುಪಿ. ಇಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕುಂದಾಪುರ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಸುಧೀರ್ ಕುಮಾರ್ ರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ಹಾಗೂ ಶ್ರೀ ರಾಮ ಸೌಹಾರ್ದ ಸಹಕಾರಿ ಸಂಘ ಇದರ ಅಧ್ಯಕ್ಷರಾದ ಶ್ರೀ ರಾಜು ಪೂಜಾರಿ ಇವರು ಭಾಗವಹಿಸಿದ್ದರು. ಸದರಿ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ವಹಿಸಿ ಸೌಹಾರ್ದ ಸಹಕಾರಿ ಸದಸ್ಯರಿಗೆ ಸೌಹಾರ್ದ ಕಾಯ್ದೆಯ ಉಗಮ, ಅಸ್ತಿತ್ವ, ಮತ್ತು ಉದ್ದೇಶಗಳ ಬೆಳವಣಿಗೆಯ ಕುರಿತು ಮಾಹಿತಿ ಹಾಗೂ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕ ಅಂಶಗಳ ಬಗ್ಗೆ ಸಲಹೆಗಳನ್ನು ನೀಡಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಮುಂದುರೆದು ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಂಜುನಾಥ ಎಸ್. ಕೆ. ರವರು ಸೌಹಾರ್ದ ಸಹಕಾರಿ ಬೆಳವಣಿಗೆಯಿಂದ ನಾಯಕತ್ವ ಬೆಳವಣಿಗೆಗೆ ಇರುವ ಅವಕಾಶಗಳು ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ನಂತರ ದ್ವಿತೀಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಗುರುಸ್ವಾಮಿ ರವರು ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ನಂತರ ತೃತೀಯ ಅವಧಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ. ಎಸ್ ರವರು ಸೌಹಾರ್ದ ಕಾಯ್ದೆಯ ಅನುಗುಣವಾಗಿ ಆಡಳಿತ ಮಂಡಳಿ ಸದಸ್ಯರ ಅಧಿಕಾರ ಮತ್ತು ಪ್ರಕಾರ್ಯಗಳು ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ. ಎಸ್. ಇವರು ತರಬೇತಿ ಕಾರ್ಯಕ್ರಮದ ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ನೆರವೇರಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 32 ಸೌಹಾರ್ದ ಸಹಕಾರ ಸಂಘಗಳಿಂದ 96 ಮಂದಿ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.



**ಉಡುಪಿ :** ದಿನಾಂಕ 07.02.2026 ರಂದು ಬೆಳಿಗ್ಗೆ 10.00 ಘಂಟೆಗೆ ಉಡುಪಿ ಜಿಲ್ಲೆಯಲ್ಲಿನ ನಷ್ಟದಲ್ಲಿರುವ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವ–ಸಹಾಯ ತರಬೇತಿ ಸಂಸ್ಥೆ ಉಡುಪಿ. ಇಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಉದ್ಘಾಟಿಸಿದರು. ಸದರಿ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ವಹಿಸಿ ಸೌಹಾರ್ದ ಸಹಕಾರಿ ಸದಸ್ಯರಿಗೆ ಸೌಹಾರ್ದ ಕಾಯ್ದೆಯ ಉಗಮ, ಅಸ್ತಿತ್ವ, ಮತ್ತು ಉದ್ದೇಶಗಳ ಬೆಳವಣಿಗೆಯ ಕುರಿತು ಮಾಹಿತಿ ಹಾಗೂ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕ ಅಂಶಗಳ ಬಗ್ಗೆ ಸಲಹೆಗಳನ್ನು ನೀಡಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಮುಂದುರೆದು ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಜಗದೀಶ್ ರಾಮ್ ಇವರು ವ್ಯವಹಾರಾಭಿವೃದ್ಧಿ ಯೋಜನೆ ಮತ್ತು ಸುಸ್ಥಿರ ಅಭಿವೃದ್ಧಿ ಯೋಜನೆಗಳು ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ನಂತರ ದ್ವಿತೀಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀಧರ್ ಸೋಮಯಾಜಿ ರವರು ಸಹಕಾರಿಯಲ್ಲಿ ಗುಣಾತ್ಮಕ ಸಾಲ ನೀಡಿಕೆ ಮತ್ತು ವಸೂಲಾತಿ ಕ್ರಮಗಳು ಈ ಕುರಿತು ಉಪನ್ಯಾಸ ನೀಡಿದರು. ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ. ಎಸ್. ಇವರು ತರಬೇತಿ ಕಾರ್ಯಕ್ರಮದ ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ನೆರವೇರಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 52 ಸೌಹಾರ್ದ ಸಹಕಾರ ಸಂಘಗಳಿಂದ 66 ಮಂದಿ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

---



**ಉಡುಪಿ :** ದಿನಾಂಕ 13.02.2026 ರಂದು ಬೆಳಿಗ್ಗೆ 10.00 ಘಂಟೆಗೆ ಉಡುಪಿ ಜಿಲ್ಲೆಯ ಉಡಪಿ, ಬ್ರಹ್ಮಾವರ, ಕಾಪು, ಕಾರ್ಕಳ ಮತ್ತು ಹೆಬ್ರಿ ತಾಲ್ಲೂಕು ತಾಲ್ಲೂಕು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದೇವಕಿ ಸಭಾಂಗಣ ಹೆರೂರು, ಬ್ರಹ್ಮಾವರ, ಉಡುಪಿ. ಇಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಭಾರತಿ ಜಿ ಭಟ್ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಭಾಸ್ಕರ್ ಕಾಮತ್ ಇವರು ಭಾಗವಹಿಸಿದ್ದರು. ಸದರಿ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ವಹಿಸಿದ್ದರು. ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಪ್ರಾಸ್ತವಿಕ ನುಡಿಯನ್ನು ನುಡಿದರು. ಮುಂದುರೆದು ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಂಜುನಾಥ ಎಸ್. ಕೆ. ರವರು ಸೌಹಾರ್ದ ಸಹಕಾರಿ ಬೆಳವಣಿಗೆಯಿಂದ ನಾಯಕತ್ವ ಬೆಳವಣಿಗೆಗೆ ಇರುವ ಅವಕಾಶಗಳು ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ನಂತರ ದ್ವಿತೀಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗುರುಸ್ವಾಮಿ ರವರು ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ನಂತರ ತೃತೀಯ ಅವಧಿಯಲ್ಲಿ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಸೌಹಾರ್ದ ಕಾಯ್ದೆಯ ಅನುಗುಣವಾಗಿ ಆಡಳಿತ ಮಂಡಳಿ ಸದಸ್ಯರ ಅಧಿಕಾರ ಮತ್ತು ಪ್ರಕಾರ್ಯಗಳು ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಶ್ರೀ ಗೋಪಾಲಕೃಷ್ಣ ರಾವ್, ಶ್ರೀ ಭಾಸ್ಕರ್ ಕಾಮತ್ ಹಾಗೂ ಶ್ರೀ ಸದಾಶಿವ ಶೆಟ್ಟಿ ಇವರಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ. ಎಸ್. ಇವರು ತರಬೇತಿ ಕಾರ್ಯಕ್ರಮದ ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ನೆರವೇರಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 67 ಸೌಹಾರ್ದ ಸಹಕಾರ ಸಂಘಗಳಿಂದ 150 ಮಂದಿ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

---



**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಜಿಲ್ಲೆಯ 2024–25ನೇ ಸಾಲಿನಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಶ್ರೀನಿವಾಸ, ಹಂಪನಕಟ್ಟೆ, ಮಂಗಳೂರು ಇಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀಮತಿ ಭಾರತಿ ಜಿ. ಭಟ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ನೆರವೇ–

ರಿಸಿದರು, ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಯನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ನೆರವೇರಿಸಿದರು ಮತ್ತು ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶ್ರೀಧರ್ ಸೋಮಯಾಜಿ, ಪ್ರಧಾನ ವ್ಯವಸ್ಥಾಪಕರು, ಶ್ರೀ ಗುರು ನರಸಿಂಹ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಮತ್ತು ಶ್ರೀ ಜಗದೀಶ್ ರಾಮ್, ಕಾರ್ಪೊರೇಟ್ ಟ್ರೈನರ್ ಇವರು ಉಪಸ್ಥಿತರಿದ್ದರು ಮತ್ತು ಕಾರ್ಯಕ್ರಮದ ಸ್ವಾಗತ, ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ನಂದನ್ ಬಿ. ಎನ್., ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ನೆರವೇರಿಸಿದರು.

ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ "ಗುಣಾತ್ಮಕ ಸಾಲ ನೀಡಿಕೆ ಹಾಗು ವಸೂಲಾತಿ" ಎಂಬ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀಧರ ಸೋಮಯಾಜಿ ರವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ "ವ್ಯವಹಾರ ಅಭಿವೃದ್ಧಿ ಯೋಜನೆಗಳು ಹಾಗೂ ಸುಸ್ಥಿರ ಅಭಿವೃದ್ಧಿ ಯೋಜನೆಗಳು" ಎಂಬ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಜಗದೀಶ್ ರಾಮ್ ರವರು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮದಲ್ಲಿ 37 ಸೌಹಾರ್ದ ಸಹಕಾರಿಗಳಿಂದ 64 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.



**ಬಳ್ಳಾರಿ :** ದಿನಾಂಕ 06.02.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ವಿಷಯಾಧಾರಿತ ತರಬೇತಿಯನ್ನು ಶ್ರೀ ಶ್ರೀನಿವಾಸ ಶನಿಶ್ವರ ದೇವಸ್ಥಾನದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶಟ್ಟಿ ಯವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಬಲಕುಂದಿ ಬನ್ನಿಕಾಳಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಗಾದಿಲಿಂಗನಗೌಡ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ವಿಶ್ವಸಿರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವಜ್ರಗಿರಿ ನಟರಾಜರವರು ಉಪಸ್ಥಿತರಿದ್ದರು. ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ಸ್ವಾಗತ ವಿಷ್ಣು ವಿಲಾಸ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಕೋರಿದರು. ರಾಘವೇಂದ್ರ ಆಚಾರ್ ವಂದನಾರ್ಪಣೆಯನ್ನು ಮಾಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಗಿರಿಧರ ಪೂಜಾರ್ ಆಗಮಿಸಿ ಸೌಹಾರ್ದ ಸಹಕಾರಿಗಳಲ್ಲಿ ಗ್ರಾಹಕ ಸಂಬಂಧಗಳ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ತರಬೇತಿಯಲ್ಲಿ ಸಿರುಗುಪ್ಪ ತಾಲೂಕಿನ 85 ಆಡಳಿತ ಮಂಡಳಿ ಸದಸ್ಯರುಗಳು, ಮುಖ್ಯಕಾರ್ಯನಿರ್ವಹಕರು, ಆಡಳಿತ ಮಂಡಳಿಯವರು ಉಪಸ್ಥಿತರಿದ್ದರು.

## ಉದ್ಘಾಟನೆ



**ವಿಜಯಪುರ :** ದಿನಾಂಕ 18.02.2026 ರಂದು ವಿಜಯಪುರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ವಿಜಯಪುರ, ಇದರ ಉದ್ಘಾಟನಾ ಕಾರ್ಯಕ್ರಮವು ಭಾವಸಾರ ಕ್ಷತ್ರೀಯ ಸಾಂಸ್ಕೃತೀಕ ಭವನ, ಆನಂದ ನಗರ, ಬಿ.ಎಲ್.ಡಿ.ಇ. ಇಂಜಿನೀಯರಿಂಗ್ ಕಾಲೇಜ್ ಎದುರುಗಡೆ, ಆಶ್ರಮ ರಸ್ತೆ, ವಿಜಯಪುರ ಇಲ್ಲಿ ಜರುಗಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಶ್ರೀ ಅಭಿನವ ಸಿದ್ಧಾರೂಢ ಸ್ವಾಮಿಗಳು, ಷಣ್ಮುಖಾರೂಢ ಮಠ, ವಿಜಯಪುರ ಹಾಗೂ ಶಾಂತಾಶ್ರಮ, ಹುಬ್ಬಳ್ಳಿ ಇವರು ವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಅಣ್ಣಾಸಾಹೇಬ ಜೊಲ್ಲೆ, ಮಾನ್ಯ ಅಧ್ಯಕ್ಷರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬೆಳಗಾವಿ ಹಾಗೂ ಮಾಜಿ ಲೋಕಸಭಾ ಸದಸ್ಯರು ಇವರು ನೆರವೇರಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ, ಇವರು ಭಾಗವಹಿಸಿ ಒಕ್ಕೂಟದ ಕಾರ್ಯಚಟುವಟಿಕೆಗಳನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಅರವಿಂದ ದೇಶಪಾಂಡೆ, ಮಾನ್ಯ ರಾಜ್ಯ ಕಾರ್ಯಕಾರಿಣಿ ಸದಸ್ಯರು, ರಾಷ್ಟ್ರೀಯ ಸ್ವಯಂಸೇವಕ ಸಂಘ, ಕರ್ನಾಟಕ ಉತ್ತರ, ಶ್ರೀ ರಮೇಶ ವೈದ್ಯ, ಮಾಜಿ ರಾಷ್ಟ್ರೀಯ ಅಧ್ಯಕ್ಷರು ಸಹಕಾರ ಭಾರತಿ, ಶ್ರೀ ಪ್ರಭುದೇವ ಆರ್. ಮಾಗನೂರ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಅಧ್ಯಕ್ಷರು ಸಹಕಾರ ಭಾರತಿ ಕರ್ನಾಟಕ, ಇವರುಗಳು ಉಪಸ್ಥಿತರಿದ್ದರು. ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ. ಉಪ್ಪಿನ ಇವರು, ಮಾಜಿ ಅಪರ ನಿಬಂಧಕರಾದ ಶ್ರೀ ಎಂ.ಜಿ.ಪಾಟೀಲ ಇವರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಗಣ್ಯರ ಸ್ವಾಗತವನ್ನು ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಕವಟಗಿ ಇವರು ಹಾಗೂ ಪ್ರಾಸ್ತಾವಿಕವನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀ ಸಂಜಯ ಪಾಟೀಲ, ಇವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಒಕ್ಕೂಟದ ನಿರ್ದೇಶಕರಾದ ಶ್ರೀ ಸುರೇಶ ಬಿರಾದಾರ, ಇವರು ನಡೆಸಿಕೊಟ್ಟರು. ಕಾರ್ಯಕ್ರದಲ್ಲಿ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳು, ಒಕ್ಕೂಟದ ಆಡಳಿತ ಮಂಡಲಿ ಸದಸ್ಯರು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ 2025 ಕಾಯ್ದೆಯ ಆಶಯಕ್ಕೆ ವ್ಯತಿರಿಕ್ತವಾಗಿರುವ ಹಾಗೂ ಸೌಹಾರ್ದ ಸಹಕಾರಿಗಳಿಗೆ ಅನಾನುಕೂಲವಾಗುವ ಕಲಂಗಳ ಸೇರ್ಪಡೆ ವಿರೋಧಿಸಿ ಹೈಕೋರ್ಟ್ ಮೆಟ್ಟಿಲೇರಿದ ಸಂಯುಕ್ತ ಸಹಕಾರಿ

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ದಿನಾಂಕ 12.09.2025ರ ಗಝೆಟ್ ನೋಟಿಫೀಕೇಶನ್ ಪ್ರಕಾರ ಹಲವಾರು ತಿದ್ದುಪಡಿಗಳನ್ನು ಮಾಡಿದೆ. ಅವುಗಳಲ್ಲಿ ಕೆಲವು ಕಲಂಗಳು ಸೌಹಾರ್ದ ಸಹಕಾರಿಗಳಿಗೆ ಅನಾನೂಕೂಲವಾಗುವುದನ್ನು ವಿರೋಧಿಸಿದ ಸಂಯುಕ್ತ ಸಹಕಾರಿ ರಾಜ್ಯ ಸರಕಾರಕ್ಕೆ ಸಲ್ಲಿಸಿದ ಮನವಿಯನ್ನು ಸರಕಾರ ಪುರಸ್ಕರಿಸದಿರುವುದರಿಂದ ಅನಿವಾರ್ಯವಾಗಿ ರಾಜ್ಯ ಹೈಕೋರ್ಟ್ ಮೆಟ್ಟಲೇರಿದೆ. ಅರ್ಜಿಯನ್ನು ಪುರಸ್ಕರಿಸಿದ ಹೈಕೋರ್ಟ್ ದಿನಾಂಕ 02.03.2026 ರಂದು ಪ್ರಕರಣದ ಮೊದಲ ವಿಚಾರಣೆ ಆರಂಭವಾಗಿದೆ.



**ಬೇಲೂರು** : ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ 2024–25 ನೇ ಸಾಲಿನಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಾಳಿಗಾಗಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ 23.02.2026 ರಂದು ಹೋಟೆಲ್ ವಿಷ್ಣು ರಿಜೆನ್ಸಿ, ಕೆ.ಜಿ ರೋಡ್ ಬೇಲೂರು ಇಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಾಗೂ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಯುತ ಮಂಜುನಾಥ ಎಸ್.ಕೆ ರವರು ನೆರವೇರಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ಇವರು ನಡೆಸಿಕೊಟ್ಟರು. ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ್ ಜಿ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿ ಯೋಜನೆಗಳು ಹಾಗು ಸುಸ್ಥಿರ ಅಭಿವೃದ್ಧಿ ಯೋಜನೆಗಳು ಎಂಬ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರಘುನಂದನ್ ಕೆ, ಸಲಹೆಗಾರರು, ಯಡಗೆರೆ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಕೊಪ್ಪ ಇವರು ಉಪನ್ಯಾಸ ನೀಡಿದರು ಕಾರ್ಯಕ್ರಮದ ದ್ವಿತೀಯ ಅವಧಿಯಲ್ಲಿ ಗುಣಾತ್ಮಕ ಸಾಲ ನೀಡಿಕೆ ಹಾಗೂ ಸಾಲ ವಸೂಲಾತಿ ಎಂಬ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶೇಖರ್ ಪಿ. ವೃತ್ತಿಪರ ನಿರ್ದೇಶಕರು, ಶ್ರೀ ಚಕ್ರಸುಧೆ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮೈಸೂರು ಇವರು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮದಲ್ಲಿ 08 ಸೌಹಾರ್ದ ಸಹಕಾರಿಗಳಿಂದ 19 ಪ್ರತಿನಿಧಿಗಳು ಭಾಗವಹಿಸಿದ್ದರು



**ಧಾರವಾಡ** : ದಿನಾಂಕ 20.02.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಳಗಾವಿ ಪ್ರಾಂತೀಯ ಕಚೇರಿಯಿಂದ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಯ ನೂತನ ಸೌಹಾರ್ದ ಸಹಕಾರಿ ಸಂಘಗಳಿಗೆ ಪ್ರವೇಶ ತರಬೇತಿಯನ್ನು ಮಂತ್ರ ರೆಸಿಡೆನ್ಸಿ ಹುಬ್ಬಳ್ಳಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ರವರು ವಹಿಸಿದ್ದರು. ಮೊದಲನೇಯ ಅವಧಿ ಸಹಕಾರ ಕ್ಷೇತ್ರದ ಪರಿಚಯ, ಪ್ರಚಲಿತ ವಿಷಯಗಳು, ಸೌಹಾರ್ದ ಸಹಕಾರಿಯ ಆಶಯ, ಕಾಯ್ದೆಯ ಮುಖ್ಯಾಂಶಗಳು ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಶ್ರೀ ಗಂಗಾರಾಮ್ ಕೊಳಪ್ಪೆ, ಟಾಸ್ಕ್ ಫೋರ್ಸ್ ವಿಭಾಗದ ಮುಖ್ಯಸ್ಥರು ಬೆಳಗಾವಿ ಇವರು ಮಾಹಿತಿಯನ್ನು ನೀಡಿದರು. ಎರಡನೇಯ ಅವಧಿಯನ್ನು ಸಹಕಾರಿ ಸಂಘಗಳ ಲೆಕ್ಕಪತ್ರ ನಿರ್ವಹಣೆ ಕುರಿತು ಶ್ರೀಮತಿ ಚೆನ್ನಮ್ಮ ಬರಮಗೌಡ್ರು, ಹಿರಿಯ ಲೆಕ್ಕಪರಿಶೋಧಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಹುಬ್ಬಳ್ಳಿ ಇವರು ಉಪನ್ಯಾಸ ನೀಡಿದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಧಾರವಾಡ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಕುಂಬಾರ ನಡೆಸಿಕೊಟ್ಟರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪ್ರವೀಣ ಬಾರ್ಕಿ ಸ್ವಾಗತಿಸಿದರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಗಂಗಮ್ಮ ನಾಯ್ಕರ ವಂದಿಸಿದರು. ತರಬೇತಿಯಲ್ಲಿ 22 ಸೌಹಾರ್ದ ಸಹಕಾರಿಗಳಿಂದ 42 ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಉಪನಿಯಮ ತಿದ್ದುಪಡಿಯ ಅನುಮೋದನೆ

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು-560 052

ಸಂ: RCS/RSR/SOU(AMD)/ 01/2026-MLPB ದಿನಾಂಕ: 30-01-2026

ವಿಷಯ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಈ ಸಹಕಾರಿಯ ಉಪನಿಯಮ ತಿದ್ದುಪಡಿಗೆ ಅನುಮೋದನೆ ಬಗ್ಗೆ

ಉಲ್ಲೇಖ: ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಉಪವಿಧಿ ತಿದ್ದುಪಡಿ ಪ್ರಸ್ತಾವೆ ಸ್ವೀಕೃತಿ ದಿನಾಂಕ: 17-11-2025

**ಪ್ರಸ್ತಾವನೆ:-**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಉಪವಿಧಿ ತಿದ್ದುಪಡಿ ಮಂಜೂರಾತಿಗಾಗಿ ಕೋರಿ ಉಲ್ಲೇಖಿತ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಪ್ರಸ್ತಾವೆಯನ್ನು ಪರಿಶೀಲಿಸಲಾಗಿ, ದಿನಾಂಕ: 22-08-2025 ರಂದು ನಡೆದಿರುವ ಸಹಕಾರಿಯ ಸರ್ವ ಸದಸ್ಯರ ಸಭೆಯಲ್ಲಿ ಉಪನಿಯಮಗಳ ತಿದ್ದುಪಡಿಗೆ ಅನುಮೋದನೆ ದೊರೆತಿದ್ದು, ಅಗತ್ಯ ಹಾಗೂ ಉಪನಿಯಮ ತಿದ್ದುಪಡಿ ಶುಲ್ಕ ರೂ. 2000-00 ಗಳನ್ನು ಚಲನ್ ಸಂಖ್ಯೆ: CR0925042500396541 ರ ಮೂಲಕ ಸರ್ಕಾರದ ಖಜಾನೆಗೆ ಪಾವತಿಸಿರುತ್ತಾರೆ ಮತ್ತು ನಿಗದಿತ ಕಾಲಾವಧಿಯೊಳಗೆ ಪ್ರಸ್ತಾವೆ ಸಲ್ಲಿಸಿರುತ್ತಾರೆ.

ಉಪವಿಧಿಗಳ ತಿದ್ದುಪಡಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಉಪವಿಧಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಅವಕಾಶಗಳಿಗೆ ಅನುಗುಣವಾಗಿದ್ದು, ಇವುಗಳನ್ನು ಅನುಮೋದಿಸಲು ತೀರ್ಮಾನಿಸಿ ಕೆಳಕಂಡ ಆದೇಶ ಹೊರಡಿಸಿದೆ.

**-: ಆದೇಶ :-**

ಪ್ರಸ್ತಾವೆಯಲ್ಲಿ ಉಲ್ಲೇಖಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 11(4) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಟಿ. ಹೆಚ್. ಎಂ. ಕುಮಾರ್, ಭಾ.ಆ.ಸೇ. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು, ಆದ ನಾನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಈ ಸಹಕಾರಿಯ ಉಪವಿಧಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಕ್ಕೆ ಅನುಗುಣವಾಗಿದ್ದು, ಇವುಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದಿಸಿ ನೋಂದಾಯಿಸಿರುತ್ತೇನೆ.

| ಕ್ರ.ಸಂ. | ಉಪವಿಧಿ ತಿದ್ದುಪಡಿ ಸಂಖ್ಯೆ | ಅನುಮೋದಿಸಿ ನೋಂದಾಯಿಸಿದ ನಂತರ ಉಪವಿಧಿಗಳ ಸ್ವರೂಪ |
|---|---|---|
| 01 | ಹೊಸದು 11(1), 2(ಎ) (ಬಿ), 3 (ಎ) (ಬಿ) (ಸಿ) (ಡಿ) (ಇ) (ಎಫ್) (ಜಿ), 4.<br>31, 35(2), ಮತ್ತು 46(2). | ಅನುಬಂಧ-5 ರಂತೆ ಅನುಮೋದಿಸಿ ನೋಂದಾಯಿಸಲ್ಪಟ್ಟಿದೆ. |

**ಷರತ್ತುಗಳು :-**

1. ಸಹಕಾರಿಯ ಯಾವುದೇ ಉಪವಿಧಿಗಳ ಅವಕಾಶಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ಇವುಗಳಡಿ ಇರುವ ಅವಕಾಶಗಳಿಗೆ ವ್ಯತಿರಿಕ್ತವಾಗಿದ್ದರೆ ಅಥವಾ ಅಸಂಗತವಾಗಿದ್ದರೆ, ಅವುಗಳು ಸದರಿ ಕಾಯ್ದೆ ಮತ್ತು ನಿಯಮಗಳನ್ವಯ ರದ್ದಾಗುತ್ತವೆ ಹಾಗೂ ಜಾರಿಗೆ ಬರುವುದಿಲ್ಲ.
2. ಉಪವಿಧಿ ತಿದ್ದುಪಡಿಯು ನೋಂದಾಯಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ.
3. ತಿದ್ದುಪಡಿಯಾದ ಉಪವಿಧಿಗಳನ್ನು ಮೂಲ ಉಪವಿಧಿಗಳೊಂದಿಗೆ ಸೇರ್ಪಡೆ ಮಾಡಿ ಸಂರಕ್ಷಿಸತಕ್ಕದ್ದು.

ಈ ಆದೇಶವನ್ನು ನನ್ನ ಸ್ವಹಸ್ತ ಮತ್ತು ಕಛೇರಿಯ ಮುದ್ರೆಯೊಂದಿಗೆ ದಿ:30-01-2026 ರಂದು ಹೊರಡಿಸಲಾಗಿದೆ.

Digitally signed by
Kumar T H M
Date: 30-01-2026
17:17:44
(... ಕುಮಾರ್, ಭಾ.ಆ.ಸೇ.)
ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**
ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop

**ತಖ್ತೆ ನಂ – 5**

ದಿನಾಂಕ : 22.08.2025 ರಂದು ನಡೆದ ಸಾಮಾನ್ಯ 24ನೇ ಸಭೆಯು ಸ್ವೀಕರಿಸಿದ ಉಪವಿಧಿಯ ತಿದ್ದುಪಡಿ ನಕಲುಗಳು.

| ಉಪವಿಧಿ ಸಂಖ್ಯೆ | ತಿದ್ದುಪಡಿ ಸ್ವೀಕರಿಸಿದ ನಂತರ ಆಗುವ ಉಪವಿಧಿ ವಿವರ |
|---|---|
| 11 | ನಾಮಮಾತ್ರ ಸದಸ್ಯರು : |

1) ಸಂಯುಕ್ತ ಸಹಕಾರಿಯು ಹಾಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚನೆಗೊಂಡ ಕರ್ನಾಟಕ ರಾಜ್ಯದಲ್ಲಿ ನೋಂದಾಯಿತ ಕಛೇರಿಯನ್ನು ಹೊಂದಿರುವ ಸಂಸ್ಥಾರೂಪದ ವ್ಯಕ್ತಿಗಳನ್ನು ನಿರ್ದಿಷ್ಟ ಅವಧಿಗೆ ನಿರ್ದಿಷ್ಟ ಉದ್ದೇಶಗಳಿಗಾಗಿ ನಾಮಮಾತ್ರ ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದು. ಆ ರೀತಿ ಸೇರಿಸಿಕೊಂಡ ನಾಮಮಾತ್ರ ಸದಸ್ಯನು ಸಂಯುಕ್ತ ಸಹಕಾರಿಗೆ ಅಗತ್ಯ ಸೇವೆಗಳನ್ನು ನೀಡುವ ಅಥವಾ ಸಂಯುಕ್ತ ಸಹಕಾರಿಯು ನಾಮಮಾತ್ರ ಸದಸ್ಯರುಗಳಿಗಾಗಿ ನಿರ್ದಿಷ್ಟಪಡಿಸಿದ ಸೇವೆಗಳನ್ನು ಪಡೆಯುವ ಸ್ಥಿತಿಯಲ್ಲಿ ಇರತಕ್ಕದ್ದು.

2) ನಾಮಮಾತ್ರ ಸದಸ್ಯತ್ವಕ್ಕೆ ಪ್ರವೇಶ :

ಎ) ನಾಮಮಾತ್ರ ಸದಸ್ಯರಾಗಬಯಸುವವರು ನಿಗದಿಪಡಿಸಿದ ಪ್ರವೇಶ ಶುಲ್ಕವನ್ನು ಪಾವತಿ ಮಾಡಿ ಲಿಖಿತದಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

ಬಿ) ಮಂಡಲಿಯು ನಾಮಮಾತ್ರ ಸದಸ್ಯತ್ವ ಕೋರಿ ಬಂದಿರುವ ಯಾವುದೇ ಅರ್ಜಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರತಕ್ಕದ್ದು. ಯಾವುದೇ ವ್ಯಕ್ತಿಗೆ, ನಾಮಮಾತ್ರ ಸದಸ್ಯತ್ವವನ್ನು ತಿರಸ್ಕರಿಸಿದರೆ ಅರ್ಜಿಶುಲ್ಕವನ್ನು ಹಿಂತಿರುಗಿಸತಕ್ಕದ್ದಲ್ಲ. ಈ ಬಗ್ಗೆ ನಿರ್ಣಯ ಕೈಗೊಂಡ ಹದಿನೈದು ದಿನಗಳಲ್ಲಿ ಅಂತಹ ವ್ಯಕ್ತಿಗೆ ಅವನ ಅರ್ಜಿ ತಿರಸ್ಕೃತವಾದ ಬಗ್ಗೆ ತಿಳಿಸತಕ್ಕದ್ದು ಮತ್ತು ಪ್ರವೇಶ ಶುಲ್ಕವನ್ನು ಹಿಂತಿರುಗಿಸತಕ್ಕದ್ದು.

3) ನಾಮಮಾತ್ರ ಸದಸ್ಯರ ಹಕ್ಕು ಮತ್ತು ಕರ್ತವ್ಯಗಳು :

ಎ) ನಾಮಮಾತ್ರ ಸದಸ್ಯರು ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಅಥವಾ ವಿಶೇಷ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು, ನೋಟೀಸು ಪಡೆಯಲು ಅರ್ಹರಾಗಿರತಕ್ಕದ್ದಲ್ಲ.

ಬಿ) ಸಂಯುಕ್ತ ಸಹಕಾರಿಯ ಯಾವುದೇ ನಿರ್ದೇಶಕ ಅಥವಾ ಪದಾಧಿಕಾರಿ ಸ್ಥಾನಕ್ಕೆ ಸ್ಪರ್ಧಿಸುವುದಕ್ಕಾಗಲೀ ಅಥವಾ ಮತದಾನ ಮಾಡುವುದಕ್ಕಾಗಲೀ ನಾಮಮಾತ್ರ ಸದಸ್ಯರು ಅರ್ಹರಾಗಿರತಕ್ಕದ್ದಲ್ಲ.

ಸಿ) ಸಂಸ್ಥಾರೂಪದ ನಾಮಮಾತ್ರ ಸದಸ್ಯರು ಪ್ರತಿವರ್ಷ ಸೆಪ್ಟಂಬರ್ 30ರೊಳಗಾಗಿ ತಮ್ಮ ಸಂಸ್ಥೆಯ ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.

ಡಿ) ಪ್ರತಿ ಸಂಸ್ಥಾರೂಪದ ನಾಮಮಾತ್ರ ಸದಸ್ಯನು ಈ ಕೆಳಗಿನಂತೆ, ಪ್ರತಿ ವರ್ಷ ಸೆಪ್ಟಂಬರ್ 30ರೊಳಗೆ, ಹಿಂದಿನ ವರ್ಷಾಂತ್ಯಕ್ಕೆ ಇದ್ದ ಅದರ ದುಡಿಯುವ ಬಂಡವಾಳಕ್ಕೆ ಅನುಗುಣವಾಗಿ ವಾರ್ಷಿಕ ಶುಲ್ಕವನ್ನು ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು. ಆ ಸಹಕಾರ ವರ್ಷದಲ್ಲಿ ಸೇರ್ಪಡೆಯಾದ ಸಂಸ್ಥಾರೂಪದ ನಾಮಮಾತ್ರ ಸದಸ್ಯರು ಆ ವರ್ಷದ ಡಿಸೆಂಬರ್ 31ರೊಳಗೆ ಸೇರ್ಪಡೆಯಾದಲ್ಲಿ ಸದರಿ ಸಾಲಿನ ಶುಲ್ಕವನ್ನು ಜನವರಿ 31 ರೊಳಗೆ ನೀಡತಕ್ಕದ್ದು.

| ಸಂಖ್ಯೆ | ದುಡಿಯುವ ಬಂಡವಾಳ ರೂ.ಗಳಲ್ಲಿ | ವಾರ್ಷಿಕ ಶುಲ್ಕ ರೂ.ಗಳಲ್ಲಿ |
|---|---|---|
| 1 | 10 ಲಕ್ಷಕ್ಕಿಂತ ಕಡಿಮೆ | 1,000 |
| 2 | 10 ಲಕ್ಷಕ್ಕಿಂತ ಹೆಚ್ಚು 1 ಕೋಟಿಗಿಂತ ಕಡಿಮೆ | 3,000 |
| 3 | 1 ಕೋಟಿಗಿಂತ ಹೆಚ್ಚು 10 ಕೋಟಿಗಿಂತ ಕಡಿಮೆ | 5,000 |
| 4 | 10 ಕೋಟಿಗಿಂತ ಹೆಚ್ಚು 50 ಕೋಟಿಗಿಂತ ಕಡಿಮೆ | 10,000 |

| | | |
|---|---|---|
| 5 | 50 ಕೋಟಿಗಿಂತ ಹೆಚ್ಚು | 20,000 |

ದುಡಿಯುವ ಬಂಡವಾಳ = ಶೇರು ಬಂಡವಾಳ + ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು + ಎಲ್ಲಾ ವಿಧದಲ್ಲಿ ಸ್ವೀಕರಿಸಿದ ಠೇವಣಿಗಳು + ಪಡೆದ ಸಾಲ

ಇ) ನಾಮಮಾತ್ರ ಸದಸ್ಯರು ಸಂಯುಕ್ತ ಸಹಕಾರಿಯು ನಾಮಮಾತ್ರ ಸದಸ್ಯರಿಗೆ ನಿರ್ದಿಷ್ಟ ಪಡಿಸುವ ಸೇವೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

ಎಫ್) ನಾಮಮಾತ್ರ ಸದಸ್ಯನು ಸಂಯುಕ್ತ ಸಹಕಾರಿಗೆ ಮುನ್ಸೂಚನೆ ಕೊಟ್ಟು ಕೆಲಸದ ವೇಳೆಯಲ್ಲಿ ತಾನು ಮಾಡಿದ ವ್ಯವಹಾರಗಳಿಗೆ ಸಂಬAಧಿಸಿದ ವಿವರಗಳನ್ನು, ದಾಖಲೆಗಳನ್ನು ಪರಿಶೀಲಿಸುವ ಮತ್ತು ಅವುಗಳ ಪ್ರತಿಗಳನ್ನು ಮಂಡಲಿಯು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿ ಪಡೆಯುವ ಹಕ್ಕುಳ್ಳವನಾಗಿರತಕ್ಕದ್ದು.

ಜಿ) ನಾಮಮಾತ್ರ ಸದಸ್ಯನು ಸಂಯುಕ್ತ ಸಹಕಾರಿಯ ಉಪವಿಧಿಗಳನ್ನು, ಲೆಕ್ಕಪರಿಶೋಧನಾ ವರದಿಯನ್ನು, ವ್ಯವಹಾರಗಳ ನಿಯಮಗಳನ್ನು ಕಛೇರಿ ಸಮಯದಲ್ಲಿ ಪರಿಶೀಲಿಸುವ ಮತ್ತು ಅವುಗಳ ಪ್ರತಿಗಳನ್ನು ಮಂಡಲಿಯು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿ ಪಡೆಯುವ ಹಕ್ಕುಳ್ಳವನಾಗಿರತಕ್ಕದ್ದು.

4) ನಾಮಮಾತ್ರ ಸದಸ್ಯತ್ವ ಮುಕ್ತಾಯ :

ಯಾವುದೇ ನಾಮಮಾತ್ರ ಸದಸ್ಯನ ಸದಸ್ಯತ್ವದ ಅವಧಿ ಮುಕ್ತಾಯವಾದ ತಕ್ಷಣ ಅವನ ಸದಸ್ಯತ್ವ ಕೊನೆಗೊಳ್ಳತಕ್ಕದ್ದು. ಆದಾಗ್ಯೂ ಯಾವುದೇ ನಾಮಮಾತ್ರ ಸದಸ್ಯನು ಸದಸ್ಯತ್ವದ ಕರ್ತವ್ಯಗಳನ್ನು ನಿರ್ವಹಿಸದಿದ್ದಲ್ಲಿ ಸಂಯುಕ್ತ ಸಹಕಾರಿಯ ಮಂಡಲಿಯು, ಅಂತಹ ಸದಸ್ಯನಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ತರುವಾಯ ಸದಸ್ಯತ್ವವನ್ನು ಮುಕ್ತಾಯಗೊಳಿಸುವ ಅಧಿಕಾರ ಹೊಂದಿರತಕ್ಕದ್ದು.

**Nominal Members:**

1) The Federal Cooperative may, in its interest, admit, any body incorporated and having its registered office with in Karnataka, as a nominal member for a specific period and for specific purpose. Such person or institution shall be in a position to provide the services required by the Federal Cooperative, or obtain the services specified by the Federal Cooperative for nominal members.

2) Admission for Nominal membership

a) Any person seeking admission as nominal membership, shall make an application in writing and on payment of the prescribed admission fee.

b) The board shall have power to either accept or reject any such application. In case membership is refused, the application fee paid by the applicant shall not be refunded to him. The applicant shall be informed in writing about the rejection within fifteen days from the date of taking such a decision and the admission fee shall be refunded to him.

3) Rights and duties of the Nominal Members.


a) A nominal member shall not be entitled to recive notice or participate in any general body meeting or special general body meeting of the Federal Cooperative.

b) A nominal member shall not have the right to vote at election to the board and shall not be eligible to be elected as a director or an office-bearer of the Federal Cooperative.

c) Every instituional Nominal members shall submit thier audit report of preceeding year before, 30th September of every year

d) Every Instituional Nominal members shall pay annual fee based on their working capital at the closure of the previous year, before, 30th September of every year at the rates as given below. Those Instituional Nominal members are admitted before 31st December of that cooperative year, shall pay annual fee before 31st Janaury of that year.

| | |
|---|---|
| | Sl. No. Working Capital (In Rs.) — Annual Fee (In Rs.)<br>1 Below 10 lakhs — 1000<br>2 10 lakhs and above but less than 1 crore — 3000<br>3 1 crore and above but less than 10 crore — 5000<br>4 10 crore and above but less than 50 crore — 10000<br>5 50 crore and above — 20000<br>Working Capital = Paid up Share Capital + Reserve Fund & Other Funds + of all types Deposits + Borrowing.<br>e) A nominal member shall have right to avail the services preiscribed by the Federal Cooperative.<br>f) A Nominal Member shall have access to the particulars of his transactions made with Federal Cooperative and the related records with prior intimation during the office hours and obtain the copies after payment of the prescribed fee as may be decided by the board.<br>g) A Nominal Member may view bye-laws, subsidiary rules or annual accounts of Federal Cooperative with prior intimation during the business hours and obtain the copies after payment of prescribed fees as may be decided by the board.<br>4) Ceasation of Nominal Membership,-<br>A person shall loose his nominal membership on the date of completion of his period of his membership. However if any nominal member fails to disharge his duties satisfactorily, the board shall have power to terminate his membership after giving an reasonable opportunity of being heard. |
| 31 | ಸಭೆಗಳನ್ನು ನಡೆಸುವ ಸ್ಥಳ :<br>.......... ಅಥವಾ ಸಂದರ್ಭಾನುಸಾರ ವಿಡಿಯೋ ಕಾನ್ಫರೆನ್ಸ್ / ವರ್ಚುವಲ್ ಮೂಲಕ ಅಂಥ ಸಭೆಗಳನ್ನು ನಡೆಸಬಹುದು. |
| 31 | **Place of Meeting: Place of Meeting:**<br>.............. .or by video conference/virtual. |
| 35 | ಸಮಿತಿಗಳು:<br>......<br>2) ಇಂಥ ಸಮಿತಿಯ ಸದಸ್ಯರ ಸಂಖ್ಯೆಯು ಕನಿಷ್ಠ ಮೂರು ಇರತಕ್ಕದ್ದು ಆದರೆ ವ್ಯವಸ್ಥಾಪಕ ನಿರ್ದೇಶಕರನ್ನು ಹೊರತುಪಡಿಸಿ, ಐದನ್ನು ಮೀರತಕ್ಕದ್ದಲ್ಲ. ಸಮಿತಿಯ ಸದಸ್ಯರಲ್ಲೊಬ್ಬನು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು. ಮತ್ತು ವ್ಯವಸ್ಥಾಪಕ ನಿರ್ದೇಶಕ ಅಥವಾ ಆ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯು ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು. |
| 35 | **committees:**<br>...... ...<br>2) Such committee shall consist of a minimum of three, but excluding Managing Director, shall not exceed five members. A member of the committee shall be chairperson and Managing Director or any officer working in that post shall act as the secretary of th committee. |
| 46(2) | ಒಂದು ಕ್ಯಾಲೆಂಡರು ವರ್ಷದಲ್ಲಿ ಒಬ್ಬ ನೌಕರನಿಗೆ ಹನ್ನೆರಡು ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಸಾಂದರ್ಭಿಕ ರಜೆಯನ್ನು ವರ್ಷದಿಂದ ವರ್ಷಕ್ಕೆ ಒಟ್ಟುಗೂಡಿಸಿಕೊಳ್ಳಲು ಅಥವಾ ಮುಂದಕ್ಕೊಯ್ಯಲಾಗದು. ಸಾಮಾನ್ಯವಾಗಿ ಒಂದು ಸಲಕ್ಕೆ ಮೂರು ದಿನಗಳಿಗಿಂತ ಹೆಚ್ಚಾಗಿ ಸಾಂದರ್ಭಿಕ ರಜೆಯನ್ನು ಅನುಮತಿಸತಕ್ಕುದಲ್ಲ. |


46(2) Twelve days casual leave may be granted to a permanent employee in a calendar year. Casual leave cannot be accumulated or carried forward from year to year. Casual leave shall not ordinarily be allowed for more than three days at a time.

ವ್ಯವಸ್ಥಾಪಕ ನಿರ್ದೇಶಕರು ಆಡಳಿತ ಮಂಡಳಿ ಸದಸ್ಯರು ಆಡಳಿತ ಮಂಡಳಿ ಸದಸ್ಯರು ಅಧ್ಯಕ್ಷರು

Karnataka State Souharda Federal Co-operative Ltd. Reg. No. RSR / SOU / AGM 136 / Regn. 05t / 2001-02 dated 04-01-2002 Bengaluru

ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಸಂಖ್ಯೆ: RCS/RSR/SOU(Amd)/01/2026. ದಿನಾಂಕ: 30/01/2026 ರನ್ವಯ ಈ ಮೇಲಿನ ಸಂಖ್ಯೆ: ಉಪನಿಯಮ 11 (1), 2(ಎ)(ಬಿ) 3(ಎ)(ಬಿ)(ಸಿ)(ಡಿ)(ಇ)(ಎಫ್)(ಜಿ), 4. 31, 35(2) ಮತ್ತು 46(2) ಇವುಗಳನ್ನು ನೋಂದಾಯಿಸಿ ಕೊಡಲಾಗಿದೆ.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

### ಶ್ರೀ ವಿಶ್ವಗುರು ಬಸವ ಪತ್ತಿನ ಶಾರದ ಸಹಕಾರಿ ನಿ., ಮುಧೋಳ ಬಾಗಲಕೋಟೆ


ಶ್ರೀ ಅಶೋಕ್ ಜಿ ಪಟ್ಟನಶೆಟ್ಟಿ
ಅಧ್ಯಕ್ಷರು


ಶ್ರೀ ಗೋಲಪ್ಪ ಎ ಗೋಲಶೆಟ್ಟಿ
ಉಪಾಧ್ಯಕ್ಷರು

### ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಗಂಗಾವತಿ


ಶ್ರೀ ಗಿರಿಯಪ್ಪ ಹೊಸಕೇರಿ
ಅಧ್ಯಕ್ಷರು


ಶ್ರೀ ಅರಳಿ ಶೇಖರಪ್ಪ
ಉಪಾಧ್ಯಕ್ಷರು

### ಮಹದೇವ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕಲಬುರಗಿ


ಶ್ರೀ ಸಿದ್ರಾಮಪ್ಪ ಬಸವಣ್ಣಪ್ಪಾ ಹರಸೂರು
ಅಧ್ಯಕ್ಷರು


ಶ್ರೀ ಭೀಮಶಂಕರ ಸಿದ್ದಣ್ಣ ಚಿತಲಿ
ಉಪಾಧ್ಯಕ್ಷರು



**ಹೊಸದುರ್ಗ :** ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ, ಹೊಸದುರ್ಗ ಸಹಕಾರಿಯ ಆಡಳಿತ ಮಂಡಳಿ ಪದಾಧಿಕಾರಿಗಳ ಚುನಾವಣೆಯಲ್ಲಿ ಸಹಕಾರಿಯ ಅಧ್ಯಕ್ಷರಾಗಿ ಶ್ರೀಯುತ ಹೆಚ್. ಎಸ್ ಶಿವಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ಶ್ರೀಯುತ ಡಿ. ಆದಿರಾಜಯ್ಯರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಡಿ.ಸಿ.ಬಿ.ಎಂ ಕೋರ್ಸಿನ ಎರಡನೇ ಸೆಮಿಸ್ಟರ್‌ನ ಸಂಪರ್ಕ ವರ್ಗ





**ಬೆಂಗಳೂರು** : ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಜಂಟಿಯಾಗಿ ನಡೆಸುತ್ತಿರುವ " ಡಿಪ್ಲೋಮಾ ಇನ್ ಕೋ–ಆಪರೇಷನ್ ಆಂಡ್ ಬ್ಯಾಂಕಿಂಗ್ ಮ್ಯಾನೇಜಮೆಂಟ್ "ಕೋರ್ಸನ ಮೂರನೇ ತಂಡದ ದ್ವಿತೀಯ ಸೆಮಿಸ್ಟರನ ಸಂಪರ್ಕ ತರಗತಿಗಳನ್ನು ದಿನಾಂಕ: 21.02.2026ರಂದು ಸೌಹಾರ್ದ ಸಹಕಾರಿ ಸೌಧ 18ನೇ ಅಡ್ಡ ರಸ್ತೆ ಮಾರ್ಗೋಸಾ ರಸ್ತೆ ಮಲ್ಲೇಶ್ವರ ಬೆಂಗಳೂರು ಇಲ್ಲಿ ಆಯೋಜಿಸಲಾಗಿದ್ದು.

ಮೊದಲನೇ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಹಾಂತಪ್ಪ ಎಸ್. ಎಂ. ಇವರು ಕೇಸ್ ಸ್ಟಡೀಸ್ ಅನಾಲೀಸಿಸ್ ಮತ್ತು ಎರಡನೇ ಅವಧಿಯಲ್ಲಿ ಶ್ರೀ ಆರ್.ಎಸ್ ಪ್ರಕಾಶ ಇವರು ಬ್ಯಾಂಕಿಂಗ್ ಕಾರ್ಯಚಟುವಟಿಕೆಗಳ ಮೂಲಭೂತ ಅಂಶಗಳು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ್ದರು.

ದಿನಾಂಕ 22.02.2026ರಂದು ಮೂರನೇ ಅವಧಿಯಲ್ಲಿ ಶ್ರೀಮತಿ ಶೋಭಾ ಆರ್ ಇವರು ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ಹಾಗೂ ನಾಲ್ಕನೇ ಅವಧಿಯಲ್ಲಿ ಕುಮಾರಿ ಸೀತಾರ ರಾಯಬಾಗಿ ಇವರು ಮಾಹಿತಿ ತಂತ್ರಜ್ಞಾನ ಎಂಬ ವಿಷಯವನ್ನು ಕುರಿತು ಉಪನ್ಯಾಸವನ್ನು ನೀಡಿದ್ದರು. ಈ ಸಂಪರ್ಕ ತರಗತಿಯಲ್ಲಿ 90 ಜನ ಅಭ್ಯರ್ಥಿಗಳು ಹಾಜರಾಗಿದ್ದರು.

**ಬೆಳಗಾವಿ** : ದಿನಾಂಕ 21.02.2026 ರಂದು ಮೂರನೇ ತಂಡದ ಡಿ.ಸಿ.ಬಿ.ಎಂ ಕೋರ್ಸಿನ ಎರಡನೇ ಸೆಮಿಸ್ಟರ್‌ನ ಸಂಪರ್ಕ ವರ್ಗದ ಮೊದಲನೇ ಅವಧಿಯಲ್ಲಿ ಕೇಸ್ ಸ್ಟಡಿಸ್ ಅನಾಲಿಸಿಸ್ ಹಾಗೂ ಎರಡನೇ ಅವಧಿಯಲ್ಲಿ ಮಾಹಿತಿ ತಂತ್ರಜ್ಞಾನ ಕುರಿತು ಡಾ ಅಭಯ್ ಕುಮಾರ್ ಗಸ್ತಿ, ಉಪನ್ಯಾಸಕರು ಇವರು ಉಪನ್ಯಾಸ ನೀಡಿದರು. ಈ ತರಬೇತಿಯಲ್ಲಿ ಒಟ್ಟು 21 ಅಭ್ಯರ್ಥಿಗಳು ಹಾಜರಿದ್ದರು.

ದಿನಾಂಕ 22.02.2026 ರಂದು ಬೆಳಗಾವಿ ಪ್ರಾಂತೀಯ ಕಛೇರಿಯ ತರಬೇತಿ ಸಭಾಂಗಣದಲ್ಲಿ ಮೂರನೇ ತಂಡದ ಡಿ.ಸಿ.ಬಿ.ಎಂ ಕೋರ್ಸಿನ ಎರಡನೇ ಸೆಮೀಸ್ಟರ್ ಎರಡನೇ ದಿನದ ಮೊದಲನೇ ಅವಧಿಯಲ್ಲಿ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ವಿಷಯದ ಕುರಿತು ಶ್ರೀ ಸ್ವಾನಂದ ಹೆಗಡೆ ಮಾನ್ಯ ಸನ್ನದ್ದು ಲೆಕ್ಕಪರಶೋಧಕರು ಬೆಂಗಳೂರು ಇವರು ಉಪನ್ಯಾಸ ನೀಡಿದರು ಹಾಗೂ ಎರಡನೇ ಅವಧಿ ಬ್ಯಾಂಕಿಗ್ ಕಾರ್ಯ ಚಟುವಟಿಕೆಗಳ ಮೂಲಭೂತ ಅಂಶಗಳ ವಿಷಯದ ಕುರಿತು ಡಾ ಸಾತ್ವಿಕ ಎಸ್ ಉಪನ್ಯಾಸಕರು, ಬಳ್ಳಾರಿ ತಾಂತ್ರಿಕಾ ಮತ್ತು ನಿರ್ವಹಣಾ ಸಂಸ್ಥೆ, ಬಳ್ಳಾರಿ ಇವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ ಒಟ್ಟು 19 ಅಭ್ಯರ್ಥಿಗಳು ಹಾಜರಿದ್ದರು.

## ಭೇಟಿ



**ತುಮಕೂರು** : ದಿನಾಂಕ 11.02.2026ರಂದು ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇವರ ವತಿಯಿಂದ ಹಿರಿಯ ಉಪನೋಂದಣಾಧಿಕಾರಿ ಕಛೇರಿ ಹಾಗೂ ಜಿಲ್ಲಾ ನೋಂದಣಾಧಿಕಾರಿ ಕಛೇರಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ತುಮಕೂರು ಕಛೇರಿಗಳಿಗೆ ಭೇಟಿ ನೀಡಿ ಸೌಹಾರ್ದ ಸಹಕಾರಿಗಳು ಹಾಗೂ ಸಹಕಾರ ಸಂಘಗಳು ಸಾಲ ನೀಡಿಕೆ ಸಂದರ್ಭದಲ್ಲಿ ಆಸ್ತಿ ಅಡಮಾನ ಮಾಡುವಾಗ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಉಂಟಾಗುತ್ತಿರುವ ತಾಂತ್ರಿಕ ಸಮಸ್ಯೆಗಳು ಹಾಗೂ ಲೋಪದೋಷಗಳನ್ನು ತುರ್ತಾಗಿ ಬಗೆಹರಿಸುವಂತೆ ಕೋರಿ ಮನವಿ ಪತ್ರ ನೀಡಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಹಾಗೂ ಒಕ್ಕೂಟದ ನಿರ್ದೇಶಕರು ಉಪಸ್ಥಿತರಿದ್ದರು.

## ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ಭೇಟಿ ಹಾಗೂ ಆಡಳಿತ ಮಂಡಳಿ ಸಭೆ

**ಬೆಂಗಳೂರು :** ದಿನಾಂಕ 07.02.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ ಎ.ಎಮ್. ರವರು ಪುಣ್ಯಭೂಮಿ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ಸಾಲ ವಸೂಲಾತಿ ಕ್ರಮ ಮತ್ತು ಠೇವಣಿಗಿಂತ ಹೆಚ್ಚಿನ ಸಾಲಗಳನ್ನು ನೀಡಿರುವ ಕುರಿತು ಚರ್ಚಿಸಿ, ದುಡಿಯುವ ಬಂಡವಾಳದಲ್ಲಿ ಶೇ.80 ಕ್ಕಿಂತ ಹೆಚ್ಚಿನ ಸಾಲ ನೀಡದಿರಲು ಸೂಚಿಸಿದರು.

ದಿನಾಂಕ 11.02.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ ಎ.ಎಮ್. ರವರು ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಸಹಕಾರಿಯ ಸಿಬ್ಬಂದಿ ನೇಮಕಾತಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಸದರಿ ಸಭೆಯಲ್ಲಿ ಸಿಬ್ಬಂದಿ ಶ್ರೇಣಿ, ವೃಂದಬಲದ ಕುರಿತು ಚರ್ಚಿಸಿ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ದಿನಾಂಕವನ್ನು ನಿಗಧಿಪಡಿಸಿ, ಸಂಯುಕ್ತ ಸಹಕಾರಿಯ ಕಾಯ್ದೆ ಹಾಗೂ ನಿಯಮಗಳಿಗನುಸಾರವಾಗಿ ಸಿಬ್ಬಂದಿ ನೇಮಕಾತಿಗೆ ಕ್ರಮವಿಡಲು ನಿರ್ಣಯಿಸಲಾಯಿತು.

ದಿನಾಂಕ 18.02.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ. ರವರು ಶ್ರೀ ಸೀತಾರಾಮ ಮಂದಿರಂ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನೇಮಕಾತಿ ಸಮಿತಿ ರಚನೆ, ದಾವೆ ದಾಖಲಿಸುವ ವಿಧಾನ ಹಾಗೂ ನಿರ್ದೇಶಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 21.02.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ಇವರು ಸೈಂಟ್ ಜೂಡ್ ಸೌಹಾರ್ದ ಪತ್ತಿನ ಸಹಕಾರಿ ನಿ, ಬೆಂಗಳೂರು ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಜವಾಬ್ದಾರಿಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.

**ಧಾರವಾಡ :** ದಿನಾಂಕ 20.02.2026 ರಂದು ದಿ ಬಸವ ಬೆಳಗು ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಹುಬ್ಬಳ್ಳಿ ಸದರಿ ಸಹಕಾರಿಯ ಅಧ್ಯಕ್ಷರಿಗೆ ಲೆಕ್ಕಪರಿಶೋಧನೆಗೆ ಕ್ರಮವಿಡಲು, ಸಾಲ ವಸೂಲಾತಿ ಕ್ರಮಕೈಗೊಂಡು ಠೇವಣಿದಾರರ ಹಣ ಮರುಪಾವತಿಗೆ ಕ್ರಮವಿಡಲು ಹಾಗೂ ಸಹಕಾರಿಗೆ ಸಂಬಂಧಿಸಿದ ಸಲಹೆ ಮತ್ತು ಸೂಚನೆಗಳನ್ನು ಟಾಸ್ಕ್ ಫೋರ್ಸ್ ಬೆಳಗಾವಿ ವಿಭಾಗದ ಮುಖ್ಯಸ್ಥರಾದ ಶ್ರೀ ಗಂಗಾರಾಮ್ ಕೊಳಾಪ್ಪೆ ರವರು ನೀಡಿದರು. ಈ ಸಂಧರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಕುಂಬಾರ ಇವರು ಉಪಸ್ಥಿತರಿದ್ದರು.

**ಬೆಳಗಾವಿ :** ದಿನಾಂಕ 20.02.2026 ರಂದು ದಿ ದೂದಗಂಗಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಬೋರಗಾಂವ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಸೌಹಾರ್ದ ಅಭಿವೃದ್ದಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ಭಾಗವಹಿಸಿ, ಅಗತ್ಯ ಮಾಹಿತಿ ನೀಡಿದರು.

**ವಿಜಯಪುರ :** ದಿನಾಂಕ 20.02.2025 ರಂದು ಶ್ರೀ ವಿಶ್ವಗುರು ಬಸವಣ್ಣ ಸೌಹಾರ್ದ ಸಹಕಾರಿ ನಿ., ಜುಮನಾಳ ಇದರ ಆಡಳಿತ ಮಂಡಳಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್ ಇವರು ಭಾಗವಹಿಸಿ ಸಹಕಾರಿಯ ಬರತಕ್ಕ ಸಾಲ ಮತ್ತು ಕೊಡತಕ್ಕ ಠೇವಣಿ ಬಗ್ಗೆ ಚರ್ಚಿಸಿದರು.

**ಚಾಮರಾಜನಗರ :** ದಿನಾಂಕ : 05.02.2026ರಂದು ರೇನಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಈ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಿ ಸಹಕಾರಿಯಲ್ಲಿ ನಿರ್ದೇಶಕರು ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಲಾಯಿತು ಈ ಸಭೆಯಲ್ಲಿ ಸಹಕಾರಿಯ 8 ಜನ ಸಹಕಾರಿಯ ನಿರ್ದೇಶಕರುಗಳು ಹಾಜರಿದ್ದರು.

**ಚಿಕ್ಕಬಳ್ಳಾಪುರ :** ದಿನಾಂಕ 16.02.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಂ. ರವರು ಶ್ರೀ ತಿರುಪತಿ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ, ಗೌರಿಬಿದನೂರು ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ಆಡಳಿತ ಮಂಡಲಿ ನಿರ್ದೇಶಕರ ಜವಾಬ್ದಾರಿ ಮತ್ತು ಕರ್ತವ್ಯಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.



**ಕುರುಗೋಡು :** ದಿನಾಂಕ 22.02.2026 ರಂದು ಶೋಭಾಶ್ರೀ ಸೌಹಾರ್ದ ಸಹಕಾರಿ ಸಂಘ ನಿ., ಕುರುಗೋಡು ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಜಿ. ಇವರು ಭಾಗವಹಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ಸಿದ್ದರಾಮೇಶ್ವರ ಉಪಸ್ಥಿತರಿದ್ದರು.

# ಯಶಸ್ವಿನಿ ಯೋಜನೆ ಕುರಿತು ಸಮಾಲೋಚನಾ ಸಭೆ



**ಬೆಂಗಳೂರು** : ದಿನಾಂಕ 02.02.2026ರಂದು ಬೆಂಗಳೂರು ನಗರ 2ನೇ ವಲಯದ ಸೌಹಾರ್ದ ಸಹಕಾರಿಗಳಿಗಾಗಿ ಯಶಸ್ವಿನಿ ಯೋಜನೆ ಕುರಿತು ಸಮಾಲೋಚನಾ ಸಭೆಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇದರ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಬೆಂಗಳೂರು ನಗರ 2ನೇ ವಲಯದ ಮಾನ್ಯ ಉಪನಿಬಂಧಕರಾದ ಶ್ರೀ ಬಿ.ಕೆ. ಸಲೀಂ ರವರು ವಹಿಸಿದ್ದರು. ಸಭೆಯಲ್ಲಿ ಮಾನ್ಯ ಸಹಾಯಕ ನಿಬಂಧಕರಾದ ಶ್ರೀಮತಿ ನಳಿನಿ ರವರು ಉಪಸ್ಥಿತರಿದ್ದರು. ಯಶಸ್ವಿನಿ ಯೋಜನೆಯ ಸೇವೆಗಳು, ಕಾರ್ಡ್‌ಗಳ ನವೀಕರಣ ಹಾಗೂ ಯೋಜನೆಯ ಮಾರ್ಗಸೂಚಿಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ 40 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 17.02.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಹಾಗೂ ಸಹಕಾರ ಇಲಾಖೆ, ಬೆಂಗಳೂರು ಇವರ ಸಹಯೋಗದಲ್ಲಿ ಯಶಸ್ವಿನಿ ಆರೋಗ್ಯ ಯೋಜನೆ ಕಾರ್ಯಾಗಾರವನ್ನು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಭಾಗವಹಿಸಿ ಯಶಸ್ವಿನಿ ಯೋಜನೆಯು ಸಹಕಾರಿಗಳಿಗೆ ಬಹಳ ಉಪಯುಕ್ತವಾಗಿದ್ದು, ಇದನ್ನು ಸದ್ಬಳಕೆ ಮಾಡಿಕೊಂಡು ತಮ್ಮ ಸದಸ್ಯರಿಗೆ ಇದರ ಪ್ರಯೋಜನವನ್ನು ದೊರಕಿಸಲು ಕ್ರಮ ಕೈಗೊಳ್ಳವಂತೆ ಸಲಹೆ ನೀಡಿದರು. ಯೋಜನೆಯು ಗ್ರಾಮೀಣ ಭಾಗದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತಿದ್ದು, ನಗರ ಭಾಗದಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಅನುಗುಣವಾದ ವಾತಾವರಣ ಸೃಷ್ಟಿಸುವಂತೆ ಇಲಾಖಾ ಅಧಿಕಾರಿಗಳಲ್ಲಿ ಕೋರಿದರು ಹಾಗೂ ಯೋಜನೆ ಕುರಿತು ಸಹಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಕೋರಿದರು. ಕಾರ್ಯಾಗಾರದಲ್ಲಿ ಬೆಂಗಳೂರು ನಗರದ 4ನೇ ವಲಯದ ಮಾನ್ಯ ಉಪನಿಬಂಧಕರಾದ ಶ್ರೀಮತಿ ಕವಿತಾ ರವರು, ಮಾನ್ಯ ಸಹಾಯಕ ನಿಬಂಧಕರಾದ ಶ್ರೀ ಹರೀಶ್ ರವರು, ಸಹಕಾರ ಇಲಾಖೆಯ ಅಧಿಕಾರಿಗಳು, ಸಂಯುಕ್ತ ಸಹಕಾರಿಯ ಬೆಂಗಳೂರು ಪ್ರಾಂತೀಯ ಕಚೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸಭೆಯಲ್ಲಿ ವಿವಿಧ ಸಹಕಾರ ಸಂಘಗಳು, ಪಟ್ಟಣ ಬ್ಯಾಂಕುಗಳು, ಸೌಹಾರ್ದ ಸಹಕಾರಿಗಳು ಒಳಗೊಂಡು82 ಸಹಕಾರಿಗಳಿಂದ 91 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿಕ್ಕಬಳ್ಳಾಪುರ** : ದಿನಾಂಕ 19.02.2026ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಯಶಸ್ವಿನಿ ಯೋಜನೆ ಕುರಿತು ಸಮಲೋಚನ ಸಭೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಸಹಾಯಕ ನಿಬಂಧಕರಾದ ಶ್ರೀ ನಾಗರಾಜ್ ರವರು ವಹಿಸಿ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಯಶಸ್ವಿನಿ ಯೋಜನೆ ಕುರಿತು ಅಗತ್ಯ ಮಾರ್ಗರ್ಶನ ನೀಡಿದರು. ಸದರಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಂ. ಇವರು ಭಾಗವಹಿಸಿದ್ದರು.

**ಶಿವಮೊಗ್ಗ** : ದಿನಾಂಕ 23.02.2026ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಯಶಸ್ವಿನಿ ಯೋಜನೆಯ ಆನ್‌ಲೈನ್ ನೋಂದಣಿ ಕುರಿತು ತರಬೇತಿ ಕಾರ್ಯಾಗಾರವನ್ನು ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಸಹಕಾರ ಭವನ, ಶಿವಮೊಗ್ಗ ಇಲ್ಲಿ ಆಯೋಜನೆ ಮಾಡಲಾಗಿತ್ತು. ಸಭೆಯಲ್ಲಿ ಯಶಸ್ವಿನಿ ಯೋಜನೆ ಕುರಿತು ಯೋಜನೆಯ ಸಂಯೋಜಕರಾದ ಶ್ರೀ ಹರೀಶ್ ಎಂ. ರವರು ಮಾಹಿತಿ ನೀಡಿದರು. ಸದರಿ ಸಭೆಯಲ್ಲಿ ಭದ್ರಾವತಿ ಹಾಗೂ ಶಿವಮೊಗ್ಗ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿಗಳು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ರವರು ಉಪಸ್ಥಿತರಿದ್ದರು. 35 ಜನ ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

---



**ತುಮಕೂರು** : ದಿನಾಂಕ 06.02.2026ರಂದು ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಹೆಚ್. ಮೂರ್ತಿ ರವರ ಅಧ್ಯಕ್ಷತೆಯಲ್ಲಿ ಯಶಸ್ವಿನಿ ಯೋಜನೆ ನೋಂದಣಿ ಹಾಗೂ ಕಾಯ್ದೆಯನುಸಾರ ಆಪದ್ದನ ನಿಧಿಗಳನ್ನು ಹೂಡಿಕೆ ಮಾಡುವ ಕುರಿತು ಸಭೆಯನ್ನು ತುಮಕೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ತುಮಕೂರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿದ್ದರು.

## ಪ್ರವರ್ತಕರ ಸಭೆ

**ಮೈಸೂರು** : ಮೈಸೂರು ಜಿಲ್ಲೆಯ ಟಿ ನರಸೀಪುರ ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 21 ಫೆಬ್ರವರಿ 2026ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಸಭಾಂಗಣ, ಎಪಿಎಂಸಿ ಮಾರುಕಟ್ಟೆ, ನಂಜನಗೂಡು ರಸ್ತೆ, ಟಿ. ನರಸೀಪುರ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಮಾನ್ಯ ನಿರ್ದೇಶಕರು ಹಾಗೂ ಟಿ. ನರಸೀಪುರ ನಂದಿನಿ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಒಂಪ್ರಕಾಶ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಸುಗಂಧರಾಜು ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೈಸೂರು ಜಿಲ್ಲಾ ಸಹಕಾರ ಯೂನಿಯನ್‌ನ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಣ್ಣ ರವರು, ವೀರಶೈವ ಮಹಾಸಭಾ ತಾಲ್ಲೂಕು ಅಧ್ಯಕ್ಷರಾದ ಶ್ರೀ ಪ್ರಕಾಶ್ ರವರು ಉಪಸ್ಥಿತರಿದ್ದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್.ಎಸ್ ರವರು ಮಾಹಿತಿಯನ್ನು ನೀಡಿದ್ದರು ಹಾಗೂ ಸಮನ್ವಯ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಿವಾನಂದ ರವರು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿಯನ್ನು ನೀಡಿದ್ದರು. ಸದರಿ ಕಾರ್ಯಕ್ರಮದಲ್ಲಿ ಟಿ ನರಸೀಪುರ ತಾಲ್ಲೂಕಿನ ಮುಖಂಡರು, ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಆಸಕ್ತರು ಭಾಗವಹಿಸಿ ಒಟ್ಟು 33 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಮಂಡ್ಯ** : ದಿನಾಂಕ 12.01.2026 ಸಂಯುಕ್ತ ಸಹಕಾರಿಯ ರಜ–ತ ಮಹೋತ್ಸವದ ಹಿನ್ನೆಲೆಯಲ್ಲಿ ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲೂಕಿನ ವಿವಿಧ ಸಂಘ–ಸಂಸ್ಥೆಗಳನ್ನು ಒಳಗೊಂಡ ಪ್ರವರ್ತಕರ ಸಭೆಯನ್ನು ರೈತ ಸಭಾಂಗಣ ಇಲ್ಲಿ ಆಯೋಜಿಸಲಾಗಿದ್ದು ಸದರಿ ಈ ಸಭೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಶೆಟ್ಟಳ್ಳಿ ಇದರ ಅಧ್ಯಕ್ಷರಾದ ನಾರಾಯಣ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು ಸದರಿ ಸಭೆಯಲ್ಲಿ ಹಾಜರಿದ್ದ ಸಹಕಾರಿ ಬಂಧುಗಳಿಗೆ ಹಾಗೂ ಪ್ರವರ್ತಕರುಗಳಿಗೆ ಸಹಕಾರಿ ಸಂಸ್ಥೆ ಮತ್ತು ಸೌಹಾರ್ದ ಕಾಯಿದೆಯ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಬಲರಾಮ್ ಎ ರವರು ಮಾರ್ಗದರ್ಶನ ನೀಡಲಾಯಿತು. ಈ ಸಭೆಯಲ್ಲಿ ಒಟ್ಟು 26 ಮಂದಿ ಸಂಘ ಸಂಸ್ಥೆಗಳ ಪ್ರವರ್ತಕರುಗಳು ಭಾಗವಹಿಸಿದ್ದರು.

**ಮಂಡ್ಯ** : ದಿನಾಂಕ : 23.01.206ರಂದು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಕೋಡಿಹಳ್ಳಿಯಲ್ಲಿ ನೂತನ ಸೌಹಾರ್ದ ಸಹಕಾರಿಯನ್ನು ರಚನೆ ಮಾಡುವ ಸಂಬಂಧ ಪ್ರವರ್ತಕರ ಸಭೆಯಲ್ಲಿ ಭಾಗವಹಿಸಿ ಸೌಹಾರ್ದ ಕಾಯ್ದೆ ಹಾಗೂ ಸಹಕಾರಿಯನ್ನು ರಚನೆ ಮಾಡುವ ಮಾಹಿತಿಯನ್ನು ನೀಡಲಾಯಿತು ಈ ಸಂದರ್ಭದಲ್ಲಿ 18 ಜನ ಪ್ರವರ್ತಕರುಗಳು ಹಾಜರಿದ್ದರು.

## ರಕ್ತದಾನ ಶಿಬಿರ



**ಬೆಂಗಳೂರು** : ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ ಯಲಹಂಕ ಉಪನಗರ, ಬೆಂಗಳೂರು ಶ್ರೀ ಶ್ರೀ ಶ್ರೀ ಮಹಾಯೋಗಿ ವೇಮನರ 614 ನೇ ಜಯಂತ್ಯೋತ್ಸವದ ಪ್ರಯುಕ್ತರೆಡ್ಡಿಜನ ಸಂಘ ಬೆಂಗಳೂರು ಉತ್ತರ ವಲಯ ಹಾಗೂ ರೆಡ್‌ಕ್ರಾಸ್ ಸಂಸ್ಥೆ ಬೆಂಗಳೂರು ಇವರ ಸಹಯೋಗದೊಂದಿಗೆ ದಿನಾಂಕ 25.02.2026 ರಂದು ಸಹಕಾರಿಯ ಕೇಂದ್ರ ಕಛೇರಿ ಆವರಣ ಮತ್ತು ನಾಗಾರ್ಜುನ ಕಾಲೇಜಿನಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿರುತ್ತದೆ ಈ ಮಹತ್ವದ ಶಿಬಿರಕ್ಕೆ ಒಟ್ಟು 501 ರಕ್ತದಾನಿಗಳು ರಕ್ತದಾನ ಮಾಡಿರುತ್ತಾರೆ ಈ ಮಹತ್ವದ ಕಾರ್ಯಕ್ರಮವು ಬಹಳ ಯಶಸ್ವಿಯಾಗಿ ಜರುಗಿತು.

## ಆಡಳಿತ ಮಂಡಲಿಯ ವಿಶೇಷ ಸಭೆ



**ಶಿವಮೊಗ್ಗ** : ದಿನಾಂಕ 02.02.2026ರಂದು ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿ ನಿ, ಶಿವಮೊಗ್ಗ ಸಹಕಾರಿಯ ಆಡಳಿತ ಮಂಡಲಿಯ ವಿಶೇಷ ಸಭೆಯನ್ನು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಸಹಕಾರಿಯ ಆರ್ಥಿಕ ಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡಿದರು. ಶಿವಮೊಗ್ಗ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಭಾಗವಹಿಸಿದ್ದರು.

ದಿನಾಂಕ 02.02.2026ರಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿ ನಿ, ಶಿವಮೊಗ್ಗ ಸಹಕಾರಿಯ ಆಡಳಿತ ಮಂಡಲಿಯ ವಿಶೇಷ ಸಭೆಯನ್ನು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಸಹಕಾರಿಯ ಆರ್ಥಿಕ ಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡಿದರು. ಶಿವಮೊಗ್ಗ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಭಾಗವಹಿಸಿದ್ದರು.



**ತುಮಕೂರು** : ದಿನಾಂಕ 16.02.2026ರಂದು ಸ್ವದೇಶ್ ಸೌಹಾರ್ದ ಸಹಕಾರಿ ಸಂಗ ನಿ, ಕೆ.ಬಿ. ಕ್ರಾಸ್, ತಿಪಟೂರು ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ವಹಿಸಿದ್ದರು. ಸಭೆಯಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಪ್ರಸ್ತುತ ಸಹಕಾರಿಯಲ್ಲಿ ಉಂಟಾಗಿರುವ ಆರ್ಥಿಕ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು ಹಾಗೂ ಸೌಹಾರ್ದ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿದ್ದರು.

## ಆರೋಗ್ಯ ತಪಾಸಣಾ ಕಾರ್ಯಕ್ರಮ



**ಹಾಸನ** : ಬಿ.ಜಿ.ಎಸ್ ಸೌಹಾರ್ದ ಸಹಕಾರಿ ಸಂಘ ನಿ., ಚನ್ನರಾಯಪಟ್ಟಣ ಇಲ್ಲಿ ದಿನಾಂಕ 07.02.2026ರ ಶನಿವಾರ ಬೆಳಗ್ಗೆ 9 ಘಂಟೆಗೆ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದ್ದ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ!! ಮಹೇಶ್.ವಿ ಅವರು ತಜ್ಞ ವೈದ್ಯರನ್ನು ರೂಪಿಸಲು ಕನಿಷ್ಠ 15 ವರ್ಷ ಬೇಕಾಗಿರುತ್ತದೆ, ಆದ್ದರಿಂದ ಆರೋಗ್ಯದ ಬಗ್ಗೆ ಜ್ಞಾನ ಮತ್ತು ಚಿಕಿತ್ಸಾ ಸೌಲಭ್ಯವನ್ನು ಪಡೆಯಲು ಈ ತರಹದ ಕಾರ್ಯಕ್ರಮಗಳನ್ನು ಆಯೋಜಿಸುವ ಹೊಣೆ ನಮ್ಮೆಲ್ಲರದ್ದಾಗಿರುತ್ತದೆ. ಇಂದು ಬಿ ಜಿ ಎಸ್ ಸೌಹಾರ್ದ ಸಹಕಾರ ಸಂಘವು ಈ ಕಾರ್ಯಕ್ರಮವನ್ನು ಏರ್ಪಡಿಸಿರುವುದಕ್ಕೆ ಅಭಿನಂದನೆ ತಿಳಿಸುತ್ತ, ಸಂಘದ ಬೆಳವಣಿಗೆ ಹಾಗೂ ಸಂಘದ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಬಂದಂತಹ ಸಹಕಾರಿಯ ಸದಸ್ಯರು ಹಾಗೂ ಸದಸ್ಯರೇತರರನ್ನು ಸೇರಿ ಒಟ್ಟು 160 ಪ್ರತಿನಿಧಿಗಳು ನೊಂದಾಯಿಸಿಕೊಂಡು, ಅವರುಗಳ ಸಾಮಾನ್ಯ ತಪಾಸಣೆ ಅಂದರೆ ತೂಕ, ಬಿಪಿ, ಶುಗರ್, ಮಾಡಿಸಿ ನಂತರ ವೈದ್ಯರುಗಳೊಂದಿಗೆ ಸಮಾಲೋಚನೆ ಮಾಡಿಸಲಾಯಿತು. ಅವರ ಸಲಹೆಯಂತೆ ECG, HBA1C, ನೇತ್ರ ಪರೀಕ್ಷೆ ಮೂಳೆ ಮತ್ತು ಸಂಧಿವಾತಕ್ಕೆ ಸಂಬಧಿಸಿದಂತೆ ಖಾಯಿಲೆಗಳಿಗೆ ತಜ್ಞ ವೈದ್ಯರುಗಳಿಂದ ಪರೀಕ್ಷೆ ಮಾಡಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಎಲ್ಲ ತಜ್ಞರು ವೈದ್ಯರು ಹಾಗೂ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಸದಸ್ಯರು ಭಾಗಿಯಾಗಿ ಸದುಪಯೋಗ ಪಡೆದುಕೊಂಡರು.

# ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕ್ರೀಡೋತ್ಸವ



**ಧಾರವಾಡ :** ದಿನಾಂಕ 08.02.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಸಹಯೋಗದೊಂದಿಗೆ ಧಾರವಾಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪದಾಧಿಕಾ–ರಿಗಳು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಕ್ರೀಡೋತ್ಸವವನ್ನು ಆರ್.ಎನ್. ಶೆಟ್ಟಿ ಕ್ರೀಡಾಂಗಣ, ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ಕ್ರೀಡೋತ್ಸವದ ಧ್ವಜಾರೋಹಣವನ್ನು ಶ್ರೀ ಶ್ರೀಧರ್ ನಾಡಗೀರ, ಪ್ರಾಂತ ಕಾರ್ಯಕಾರಿ ಸದಸ್ಯರು, ರಾಷ್ಟ್ರೀಯ ಸ್ವಯಂಸೇವಕ ಸಂಘ ಕರ್ನಾಟಕ ಉತ್ತರ ಇವರು ನೇರವರಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಪೂಜ್ಯ ಮಹಾಪೌರರಾದ ಶ್ರೀಮತಿ ಜ್ಯೋತಿ ಪಾಟೀಲ್ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪರವರು ಭಾಗವಹಿಸಿದ್ದರು.

ಸಮಾರೋಪ ಸಮಾರಂಭ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ಇವರು ವಹಿಸಿ ಬಹುಮಾನ ವಿತರಣೆ ಮಾಡಿದರು ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ್ ಹೊರೆಕೇರಿ ಇವರು ಉಪಸ್ಥಿತರಿದ್ದರು. ವೇದಿಕೆ ಮೇಲೆ ಹಿರಿಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಉಪಸ್ಥಿತರಿದ್ದರು. ಕ್ರೀಡಾಕೂಟದಲ್ಲಿ ಒಟ್ಟು 242 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

---





**ಬಳ್ಳಾರಿ :** ದಿನಾಂಕ 22.02.2026 ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಪಟ್ಟಣದ ಶ್ರೀ ನಿಟ್ಟೂರು ನರಸಿಂಹ ಮೂರ್ತಿ ಬಯಲು ಜಾಗ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಬಳ್ಳಾರಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಸಂಯುಕ್ತಾಶ್ರಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವದ ಹಿನ್ನಲೆಯಲ್ಲಿ ಸಹಕಾರ ಜಾಗೃತಿ ಜಾಥ ಹಾಗೂ ಕ್ರೀಡಾಕೂಟದ ಸಮಾರೋಪ ಸಮಾರಂಭ ಸಾಯಂಕಾಲ 7.30ಕ್ಕೆ ಜರುಗಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಜಿ. ನಂಜನಗೌಡ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ರವರು ನೆರವೇರಿಸಿದರು. ದಿವ್ಯ ಸಾನಿಧ್ಯವನ್ನು ಶ್ರೀ ಮ.ನಿ ಪ್ರ ಅಭಿನವ ಮಹಾಂತ ಮಹಾಸ್ವಾಮಿಗಳು ಚರಣಗಿ ಸಂಸ್ಥಾನ ಹಾಲ್ವಿ ಹಾಗೂ ಶ್ರೀ ಮ.ನಿ ಪ್ರ ಬಸವಭೂಷಣ ಮಹಾಸ್ವಾಮಿಗಳು ಗುರುಬಸವ ಮಹಾಮತ ಸಿರುಗುಪ್ಪ ವಹಿಸಿಕೊಂಡಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಜೆ ಹನುಮಂತಯ್ಯ ಶೆಟ್ಟಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ. ಶ್ರೀಧರ, ಶ್ರೀಮತಿ ಶೈಲಜಾ ತಪಲಿಯವರು ಹಾಗೂ ಮಾಜಿ ಶಾಸಕರಾದ ಶ್ರೀ ಟಿ.ಎಂ ಚಂದ್ರಶೇಖರಯ್ಯ ಸ್ವಾಮಿ, ಪಿಕಾರ್ಡ್ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಚೊಕ್ಕ ಬಸವನಗೌಡ್ರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಮಾರೋಪ ಸಮಾರಂಭದಲ್ಲಿ ಕ್ರೀಡೆಯಲ್ಲಿ ವಿಜೇತರಾದ ಕ್ರಿಡಾಪಟುಗಳಿಗೆ ಬಹುಮಾನ ವಿತರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸದರಿ ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ನಿರ್ದೇಶಕರು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಬಳ್ಳಾರಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಸಂಯುಕ್ತಾಶ್ರಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವದ ಪ್ರಯುಕ್ತ ಸಹಕಾರ ಜಾಗೃತಿ ಜಾಥ ಜರುಗಿಸಲಾಯಿತು. ಸಹಕಾರಿಯ ಧ್ವಜಾರೋಹಣವನ್ನು ಹಿರಿಯ ಸಹಕಾರಿಗಳಾದ ಶ್ರೀ ಎನ್ ಜಿ ಬಸವರಾಜಪ್ಪ ಮಾನ್ಯ ಅಧ್ಯಕ್ಷರು ಅಕ್ಕಿ ಗಿರಣಿ ಮಾಲಿಕರ ಸಂಘ ಸಿರುಗುಪ್ಪ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಕೆ. ನಾಗನಗೌಡ, ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಯವರು ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ 330ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸಿದ್ದರು.

# ಸಂಯುಕ್ತ ಸಹಕಾರಿಯ ರಜತ ಮಹೋತ್ಸವದ ನಿಮಿತ್ತ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರುಗಳಿಗೆ ಸನ್ಮಾನ



**ತುಮಕೂರು :** ದಿನಾಂಕ 03.02.2026ರಂದು ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ಇವರನ್ನು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಪ್ರಯುಕ್ತ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ತುಮಕೂರು ಜಿಲ್ಲಾ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು, ನಿರ್ದೇಶಕರು ಉಪಸ್ಥಿತ–ರಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿದ್ದರು.



**ಶಿವಮೊಗ್ಗ :** ದಿನಾಂಕ 03.02.2026ರಂದು ಸಂಯುಕ್ತ ಸಹಕಾರಿಯ ಮಾಜಿ ಉಪಾಧ್ಯಕ್ಷರಾದ ಶ್ರೀ ಯು.ಹೆಚ್. ರಾಮಪ್ಪ ಇವರನ್ನು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಪ್ರಯುಕ್ತ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್ ರವರು ಉಪಸ್ಥಿತರಿದ್ದರು.



**ಚಿತ್ರದುರ್ಗ :** ದಿನಾಂಕ 09.02.2026ರಂದು ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾ–ರಿಯ ಮಾಜಿ ನಿರ್ದೇಶಕರಾದ ಶ್ರೀ ಹಂಜಿ ಶಿವಸ್ವಾಮಿ ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಉಪಸ್ಥಿತರಿದ್ದರು.



**ಚಿಕ್ಕಬಳ್ಳಾಪುರ :** ದಿನಾಂಕ 11.02.2026ರಂದು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತ ಇವರನ್ನು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಪ್ರಯುಕ್ತ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ಅನಿಲ್ ಕುಮಾರ್ ಎಂ. ರವರು ಉಪಸ್ಥಿತರಿದ್ದರು.



**ಬೆಂಗಳೂರು ಗ್ರಾಮಾಂತರ :** ದಿನಾಂಕ 11.02.2026ರಂದು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎನ್. ರಮೇಶ್ ಇವರನ್ನು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಪ್ರಯುಕ್ತ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ಅನಿಲ್ ಕುಮಾರ್ ಎಂ. ರವರು ಉಪಸ್ಥಿತರಿದ್ದರು.



**ವಿಜಯಪುರ** : ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನೆಲೆಯಲ್ಲಿ, ದಿನಾಂಕ 17–02–2026 ರಂದು ಸಂಯುಕ್ತ ಸಹಕಾರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್ ಹಾಗೂ ಶ್ರೀ ವಿನೋದ ಹಟ್ಟಿ ಇವರು ಉಪಸ್ಥಿತರಿದ್ದರು.



**ವಿಜಯಪುರ** : ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನೆಲೆಯಲ್ಲಿ, ದಿನಾಂಕ 17–02–2026 ರಂದು ಸಂಯುಕ್ತ ಸಹಕಾರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಎಂ. ಜಿ. ಪಾಟೀಲ ಇವರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್ ಹಾಗೂ ಶ್ರೀ ವಿನೋದ ಹಟ್ಟಿ ಇವರು ಉಪಸ್ಥಿತರಿದ್ದರು.



**ವಿಜಯಪುರ** : ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನೆಲೆಯಲ್ಲಿ, ದಿನಾಂಕ 17–02–2026 ರಂದು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ. ಉಪ್ಪಿನ ಇವರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ರವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ, ಶ್ರೀ ಸಿದ್ದೇಶ್ವರ ಸಂಸ್ಥೆ ವಿಜಯಪುರ ಇದರ ಸದಸ್ಯರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್ ಹಾಗೂ ಶ್ರೀ ವಿನೋದ ಹಟ್ಟಿ ಇವರು ಉಪಸ್ಥಿತರಿದ್ದರು.



**ವಿಜಯಪುರ** : ದಿನಾಂಕ 17–02–2026 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಶ್ರೀ ಸಿದ್ದೇಶ್ವರ ಸಂಸ್ಥೆ ವಿಜಯಪುರ, ಸಂಸ್ಥೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ಮಾನ್ಯರಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ.ಉಪ್ಪಿನ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ, ಸಿದ್ದೇಶ್ವರ ಸಂಸ್ಥೆಯ ಸದಸ್ಯರು ಮತ್ತು ಸಿದ್ಧಸಿರಿ ಮಲ್ಟಿಸ್ಟೇಟ್ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜ್ಯೋತಿಭಾ ಖಂಡಾಳೆ ರವರು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್ ಹಾಗೂ ಶ್ರೀ ವಿನೋದ ಹಟ್ಟಿ ಉಪಸ್ಥಿತರಿದ್ದರು.



**ಚಾಮರಾಜನಗರ** : ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನೆಲೆಯಲ್ಲಿ ದಿನಾಂಕ 07.02.2026ರಂದು ಶ್ರೀ ದಿನೇಶ್‌ಗುಪ್ತ, ಮಾಜಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಮೈಸೂರು, ಇವರು ಭೇಟಿ ಮಾಡಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲಿ ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಚಾಮರಾಜನಗರ ಜಿಲ್ಲೆ ಇವರು ಉಪಸ್ಥಿತರಿದ್ದರು.



**ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ** : ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನಲೆಯಲ್ಲಿ ದಿನಾಂಕ 11.02.2026 ರಂದು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಮಹಾಬಲ ಬಿ.ಎಸ್ ರವರನ್ನು ಭೇಟಿ ಮಾಡಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತಿಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅಶೋಕ ಜಿ ರವರು, ಉಪಸ್ಥಿತರಿದ್ದರು.



**ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ** : ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನಲೆಯಲ್ಲಿ ದಿನಾಂಕ 11.02.2026 ರಂದು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ವಿಶ್ವನಾಥ್ ಎಸ್.ಎನ್ ರವರನ್ನು ಭೇಟಿ ಮಾಡಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತಿಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ ಜಿ ರವರು, ಹಾಗೂ ಹಿಮಗಿರಿ ಸೌಹಾರ್ದ ಸಹಕಾರಿ ಸಂಘದ ಸಿ.ಇ.ಓ ರವರು ಉಪಸ್ಥಿತರಿದ್ದರು.



**ಮಂಡ್ಯ** : ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನೆಲೆಯಲ್ಲಿ ದಿನಾಂಕ 09.02.2026 ರಂದು ಶ್ರೀ ನಾಗರಾಜು ಎಸ್ ಮಾಜಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಮೈಸೂರು, ಇವರು ಭೇಟಿ ಮಾಡಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಹಕಾ–ರಿಯ ಉಪಾಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿ ವರ್ಗದವರು ಹಾಗೂ ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಚಾಮರಾಜನಗರ ಜಿಲ್ಲೆ ಇವರು ಹಾಗೂ ಜಗಜ್ಯೋತಿ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಇದರ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



**ಕೊಡಗು** : ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನೆಲೆಯಲ್ಲಿ ದಿನಾಂಕ : 20.01.2026 ರಂದು ಶ್ರೀ ಎಂ.ಕೆ ಸೋಮಯ್ಯ ಮಾಜಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ರವರು, ವೃತ್ತಿಪರ ನಿರ್ದೇಶಕರಾದ ಶ್ರೀ ಮಹೇವಸ್ವಾಮಿ ರವರು ಹಾಗೂ ಮಾಜಿ ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ರವರು ಸಂಯುಕ್ತ ಸಹಕಾರಿ ಪರವಾಗಿ ಸನ್ಮಾನಿಸಿ, ಗೌರವಿಸಿದರು. ಈ ಸಂದರ್ಭದಲ್ಲಿ ಸಹಕಾ–ರಿಯ ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ ಯವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಸುರೇಶ್ ಆರ್ ಎಸ್ ರವರು, ಸ್ಥಳೀಯ ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೊಡಗು** : ಸೌಹಾರ್ದ ಕಾಯ್ದೆಯ ರಜತ ಮಹೋತ್ಸವದ ಹಿನ್ನಲೆಯಲ್ಲಿ ದಿನಾಂಕ 11.02.2026ರಂದು ಕೊಡಗು ಜಿಲ್ಲೆಯ ಸಂಯುಕ್ತ ಸಹಕಾ–ರಿಯ ಮಾಜಿ ನಿರ್ದೇಶಕರಾದ ಶ್ರೀ ಭೀಮಯ್ಯ ರವರನ್ನು ಭೇಟಿ ಮಾಡಿ ಸಂಯುಕ್ತ ಸಹಕಾರಿಯ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತಿಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ್ ಆರ್ ಎಸ್ ರವರು, ಉಪಸ್ಥಿತರಿದ್ದರು.





**ಉಡುಪಿ :** ದಿನಾಂಕ 13.02.2026 ರಂದು ಉಡುಪಿ ಜಿಲ್ಲೆಯ ಉಡುಪಿ, ಬ್ರಹ್ಮಾವರ, ಕಾಪು, ಕಾರ್ಕಳ ಮತ್ತು ಹೆಬ್ರಿ ತಾಲ್ಲೂಕು ತಾಲ್ಲೂಕು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದೇವಕಿ ಸಭಾಂಗಣ ಹೇರೂರು, ಬ್ರಹ್ಮಾವರ, ಉಡುಪಿ. ಇಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಂಧರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಂ. ಗೋಪಿಕೃಷ್ಣ ರಾವ್, ಶ್ರೀ ಭಾಸ್ಕರ್ ಕಾಮತ್ ಹಾಗೂ ಶ್ರೀ ಸದಾಶಿವ ಶೆಟ್ಟಿ ಇವರಿಗೆ ಸಂಯುಕ್ತ ಸಹಕಾರಿಯ ಪರವಾಗಿ ಹಾಲಿ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಹಾಗೂ ಶ್ರೀಮತಿ ಭಾರತೀ ಜಿ ಭಟ್ ರವರು ಸನ್ಮಾನವನ್ನು ಮಾಡಿ ಗೌರವವನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಹಾಗೂ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ. ಎಸ್. ಇವರು ಮತ್ತು ಸ್ಥಳೀಯ ಸಹಕಾರಿಗಳು ಉಪಸ್ಥಿತರಿದ್ದರು.



**ತುಮಕೂರು :** ದಿನಾಂಕ 16.02.2026ರಂದು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಉಮೇಶ್ ಉಪಾಧ್ಯ ಇವರನ್ನು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಪ್ರಯುಕ್ತ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ. ಪಿ. ವಿಜಯ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ದಿನಾಂಕ 17.02.2026ರಂದು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಹೆಚ್. ವಿ. ರವಿಕುಮಾರ ಇವರನ್ನು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಪ್ರಯುಕ್ತ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಸಹ್ಯಾದ್ರಿ ಸೌಹರ್ದ ಸಹಕಾರಿ ಸಂಘಗಳ ಒಕ್ಕೂದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಹರೀಕೃಷ್ಣ, ಧರ್ಮನ್ಯಾಸ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು & ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಉಪಸ್ಥಿತರಿದ್ದರು.



**ಬೆಂಗಳೂರು :** ದಿನಾಂಕ 20.02.2026ರಂದು ಸಂಯುಕ್ತ ಸಹಕಾ–ರಿಯ ಮಾಜಿ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ. ನಾಗರತ್ನ ಇವರನ್ನು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಪ್ರಯುಕ್ತ ಬೆಂಗಳೂರು ಪ್ರಾಂತದ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸನ್ಮಾನಿಸಿ ಗೌರವಿಸಿದರು.



**ಬೆಂಗಳೂರು ದಕ್ಷಿಣ :** ದಿನಾಂಕ 17.02.2026ರಂದು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಆಂಜನೇಯ ಗುಪ್ತ ಇವರನ್ನು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಪ್ರಯುಕ್ತ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸನ್ಮಾನಿಸಿ ಗೌರವಿಸಿದರು.

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026

## ಧ್ಯೇಯ : ಹಕ್ಕು, ನ್ಯಾಯ ಮತ್ತು ಕ್ರಿಯೆ : ಮಹಿಳಾ ಸಮಾನತೆಗೆ ಹೊಸ ದಿಕ್ಸೂಚಿ

## ಲಿಂಗ ಸಮಾನತೆ : ಸಮಾಜದ ಸಮಗ್ರ ಅಭಿವೃದ್ಧಿಗೆ ಬುನಾದಿ

– ಶ್ರೀಮತಿ ದಿವ್ಯ. ಟಿ. ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.




**Rights, Justice, Action for ALL Women and Girls**
**Give To Gain**

**"ಮಹಿಳೆಯರ ಸಮಾನತೆಗಾಗಿ ಹೋರಾಟವು ಒಂದೇ ವ್ಯಕ್ತಿ ಅಥವಾ ಸಂಸ್ಥೆಯದ್ದಲ್ಲ, ಅದು ಮಾನವ ಹಕ್ಕುಗಳಿಗಾಗಿ ಕಾಳಜಿ ವಹಿಸುವ ಎಲ್ಲರ ಸಾಮೂಹಿಕ ಜವಾಬ್ದಾರಿಯಾಗಿದೆ" – ಗ್ಲೋರಿಯಾ ಸ್ಟೀನೆಮ್, ವಿಶ್ವಪ್ರಸಿದ್ಧ ಸ್ತ್ರೀವಾದಿ, ಪತ್ರಕರ್ತೆ ಮತ್ತು ಕಾರ್ಯಕರ್ತೆ**

### ಪೀಠಿಕೆ :

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯು ಕೇವಲ ಒಂದು ಆಚರಣೆಯಲ್ಲ, ಇದು ಜಾಗತಿಕ ಚಳುವಳಿಯಾಗಿ ಪಸರಿಸಿ ಎಲ್ಲಾ ರೀತಿಯಲ್ಲಿ ಲಿಂಗ ಆಧಾರಿತ ತಾರತಮ್ಯದ ವಿರುದ್ಧ ಹೋರಾಡಿ, ಲಿಂಗ ಸಮಾನತೆಯ ಅಗತ್ಯತೆಯನ್ನು ಜಗತ್ತಿಗೆ ಸಾರಿದ ಪ್ರತೀಕ. ಇದಕ್ಕೆ ಸಾಕ್ಷಿಯಾಗಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರತಿ ವರ್ಷ ಮಾರ್ಚ್ 08ರಂದು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಪ್ರಸ್ತುತ 115ನೇ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

### 2026ರ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ :

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಗೆ ವಿಶ್ವ ಸಂಸ್ಥೆ ಹಾಗೂ IWD Campaign (ಅಂತರರಾಷ್ಟ್ರೀಯ ಮಹಿಳಾ ದಿನದ ಜಾಗೃತಿ ಅಭಿಯಾನ) ಇಂದ ಘೋಷಿಸಲಾಗುವ ಧ್ಯೇಯ ವಾಕ್ಯದ ಮೂಲಕ ವಿಶ್ವದಾದ್ಯಂತ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾರ್ಚ್ 08ರಂದು ಅತ್ಯಂತ ಪರಿಣಾಮಕಾರಿಯಾಗಿ ಆಚರಿಸಲಾಗುತ್ತಿದೆ. ಈ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಗೆ ನೂರು ವರ್ಷಗಳಿಗೂ ಹೆಚ್ಚು ಕಾಲ ಇತಿಹಾಸವಿದ್ದರೂ ಸಹ ಮಹಿಳೆಯರ ಪ್ರಗತಿಯ ಮೇಲೆ ವ್ಯತಿ–ರಿಕ್ತ ಪರಿಣಾಮ ಬೀರುವ ಅನೇಕ ಸಮಸ್ಯೆಗಳು ಪ್ರಸ್ತುತವೂ ಸಹ ಇವೆ. 1911 ರಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಮೂಲಕ ಈ ದಿನಾಚರಣೆಯು ಲಿಂಗ ಸಮಾನತೆಯ ಬಗ್ಗೆ ಕಾಳಜಿ ವಹಿಸುವ ಪ್ರತಿಯೊಬ್ಬರಿಗೂ ಸಹ ಈ ದಿನ ಸೇರಿದೆ. ಈ ಆಚರಣೆಯ ಮೂಲಕ ಎಲ್ಲಾ ವಿಧದಲ್ಲಿಯೂ ಉಂಟಾಗುವ ಲಿಂಗ ತಾರತಮ್ಯದ ಬಗ್ಗೆ ಜಾಗೃತಿ ಮೂಡಿಸಿ, ಲಿಂಗ ಸಮಾನತೆಯನ್ನು ಸಾಧಿಸಲು ಕ್ರಮ ಕೈಗೊಳ್ಳುವಂತಹ ಚಟುವಟಿಕೆಗಳನ್ನು ಒಳಗೊಂಡಿದೆ.

ವಿಶ್ವ ಸಂಸ್ಥೆಯು ಪ್ರತಿ ವರ್ಷ ಮಹಿಳಾ ಸಬಲೀಕರಣ ಮತ್ತು ಜಾಗತಿಕ ಸಮಾನತೆಯ ದೃಷ್ಟಿಯಿಂದ ಧ್ಯೇಯ ವಾಕ್ಯವನ್ನು ಪ್ರಕಟಿಸುತ್ತದೆ. ವಿಶ್ವ ಸಂಸ್ಥೆಯು ಪ್ರಕಟಿಸಿರುವ 2026ರ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಧ್ಯೇಯವು "Rights, Justice, Action for ALL Women and Girls" "ಮಹಿಳೆಯರು ಹಾಗೂ ಹೆಣ್ಣು ಮಕ್ಕಳಿಗಾಗಿ ಹಕ್ಕುಗಳು, ನ್ಯಾಯ, ಕ್ರಿಯೆ" ಎಂಬುದಾಗಿದೆ. ವಿಶ್ವದಾದ್ಯಂತ ಪುರುಷರು ಹೊಂದಿರುವ ಕಾನೂನು ಹಕ್ಕುಗಳಲ್ಲಿ ಶೇ.64ರಷ್ಟು ಮಾತ್ರ ಮಹಿಳೆಯರು ಹೊಂದಿದ್ದಾರೆ. ಇಂದಿಗೂ ಸಹ ಉದ್ಯೋಗ, ಹಣ, ಸುರಕ್ಷತೆ, ಕುಟುಂಬ, ಆಸ್ತಿ, ಚಲನಶೀಲತೆ, ವ್ಯವಹಾರ ಮತ್ತು ನಿವೃತ್ತಿ ಸೇರಿದಂತೆ ಜೀವನದ ಮೂಲಭೂತ ಕ್ಷೇತ್ರಗಳಲ್ಲಿ ಮಹಿಳೆಯರು ಅನಾನೂಕೂಲವನ್ನು ಅನುಭವಿಸುತ್ತಿದ್ದಾರೆ. ಪ್ರಸ್ತುತ ಎಲ್ಲಾ ಮಹಿಳೆಯರು ಹಾಗೂ ಹೆಣ್ಣು ಮಕ್ಕಳಿಗಾಗಿ ಹಕ್ಕುಗಳು, ನ್ಯಾಯ, ಕ್ರಿಯೆ ಎಂಬ ವಿಷಯದ ಅಡಿಯಲ್ಲಿ ಕಾನೂನುಗಳಲ್ಲಿ ಅಬಲರ ರಕ್ಷಣೆಗಳು ಮತ್ತು ಮಹಿಳೆಯರ ಹಾಗೂ ಹೆಣ್ಣು ಮಕ್ಕಳ ಹಕ್ಕುಗಳನ್ನು ಕಸಿದುಕೊಳ್ಳುವ ವ್ಯತಿರಿಕ್ತ ಅಭ್ಯಾಸ ಹಾಗೂ ಸಾಮಾಜಿಕ ರೂಢಿಗಳು ಸೇರಿದಂತೆ ಸಮಾನ ನ್ಯಾಯಕ್ಕೆ ಇರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲು ಕರೆ ನೀಡಿದೆ. ನ್ಯಾಯ ವ್ಯವಸ್ಥೆಗಳಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಬಲಪಡಿಸುವುದು ಆಗಿದೆ. ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಹೆಚ್ಚಾಗಿ ಭಾಗವಹಿಸುತ್ತಿದ್ದರೂ ಸಹ ನ್ಯಾಯಾಂಗ ನಾಯಕತ್ವದ ಪಾತ್ರಗಳಲ್ಲಿ ಅವರು ಕಡಿಮೆ ಪ್ರಾತಿನಿಧ್ಯವನ್ನು ಹೊಂದಿದ್ದಾರೆ. ನ್ಯಾಯಯುತತೆಗೆ ಮಾತ್ರವಲ್ಲದೇ ಕಾನೂನು ಸಂಸ್ಥೆಗಳಲ್ಲಿ ನಂಬಿಕೆಯನ್ನು ಬೆಳೆಸಲು ಸಹ ಮಹಿಳಾ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವುದು ಅತ್ಯಗತ್ಯ. ಅಂತರ ರಾಷ್ಟ್ರೀಯ ಮಹಿಳಾ ನ್ಯಾಯಾಧೀಶರ ದಿನವನ್ನು ಗುರುತಿಸುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಘೋಷಣೆಯು ಐತಿಹಾಸಿಕ ಅಸಮಾನತೆಯನ್ನು ಸರಿಪಡಿಸುವ ಜಾಗತಿಕ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. "ನ್ಯಾಯದಲ್ಲಿ ಮಹಿಳೆಯರು, ನ್ಯಾಯಕ್ಕಾಗಿ ಮಹಿಳೆಯರು" ನಂತಹ ಅಭಿಯಾನಗಳು ಕಾನೂನು ಚೌಕಟ್ಟಿನೊಳಗೆ ಮಹಿಳೆಯರನ್ನು ಸಬಲೀಕರಣಗೊಳಿಸುವುದು ಪ್ರಜಾಪ್ರಭುತ್ವ, ಶಾಂತಿ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಬಲಪಡಿಸುತ್ತದೆ ಎಂಬುದನ್ನು ಒತ್ತಿ ಹೇಳುತ್ತಿವೆ.

IWD Campaign (ಅಂತರರಾಷ್ಟ್ರೀಯ ಮಹಿಳಾ ದಿನದ ಜಾಗೃತಿ ಅಭಿಯಾನ) ವು ಸಮಾಜದಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ತನ್ನದೇ ಆದ ಧ್ಯೇಯ ವಾಕ್ಯವನ್ನು ನೀಡುತ್ತದೆ. IWD Campaign ನೀಡಿರುವ 2026ರ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಧ್ಯೇಯ

ವಾಕ್ಯವು "Give to Gain" "ಪಡೆಯಲು ನೀಡಿ" ಎಂಬುದಾಗಿದೆ. ನಾವು ನೀಡುವುದರಿಂದಲೇ ನಿಜವಾದ ಬೆಳವಣಿಗೆ ಮತ್ತು ಸಾಧನೆ ಸಾಧ್ಯ. ಸಹಕಾರ, ಹಂಚಿಕೆ, ಬೆಂಬಲದ ಮೂಲಕ ಮಹಿಳಾ ಸಬಲೀಕರಣವನ್ನು ಉತ್ತೇಜಿಸುವ ಸಂದೇಶವಾಗಿದೆ. ಲಿಂಗ ತಾರತಮ್ಯದ ಬಗ್ಗೆ ಜಾಗೃತಿ ಮೂಡಿಸಿ, ಲಿಂಗ ಸಮಾನತೆಯನ್ನು ರೂಪಿಸಲು ಕ್ರಮ ಕೈಗೊಳ್ಳಲು ಕರೆ ನೀಡಿದೆ. Give To Gain ಅಭಿಯಾನದ ವಿಷಯವು ಜಾಗೃತಿಯನ್ನು ಮಾತ್ರವಲ್ಲದೇ ಕ್ರಿಯೆಯನ್ನೂ ಸಹ ಪ್ರೋತ್ಸಾಹಿಸುತ್ತದೆ. ಪ್ರತಿ IWD ಕಾರ್ಯಕ್ರಮವು ಶಿಕ್ಷಣ, ಆರೋಗ್ಯ ರಕ್ಷಣೆ, ಕಾನೂನು ನೆರವು ಅಥವಾ ಉದ್ಯಮಶೀಲತೆಯ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸುವುದರ ಮೂಲಕ ನಿಜವಾದ ಸಮಾನತೆಯತ್ತ ಪ್ರಗತಿಯನ್ನು ವೇಗಗೊಳಿಸುತ್ತದೆ.

**ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಾಮುಖ್ಯತೆ :**

2026ರ ಅಂತರ ರಾಷ್ಟ್ರೀಯ ಮಹಿಳಾ ದಿನವು ಆಚರಣೆಗಿಂತ ಹೆಚ್ಚಾಗಿ ಕ್ರಿಯೆಗೆ ಕರೆ ನೀಡುತ್ತಿದೆ. ಲಿಂಗ ತಾರತಮ್ಯ ಕಾನೂನುಗಳು ಮತ್ತು ವ್ಯತಿರಿಕ್ತ ಸಾಮಾಜಿಕ ರೂಢಿಗಳ ವಿರುದ್ಧ ಸವಾಲೆಸೆದು, ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳಾ ನಾಯಕತ್ವವನ್ನು ಬೆಂಬಲಿಸಲು, ನ್ಯಾಯ ಮತ್ತು ಅವಕಾಶಗಳಿಗೆ ಸಮಾನ ಪ್ರವೇಶವನ್ನು ಉತ್ತೇಜಿಸಲು, ಶಿಕ್ಷಣ ಮತ್ತು ಸಂಪನ್ಮೂಲಗಳ ಮೂಲಕ ಮಹಿಳಾ ಸಬಲೀಕರಣವನ್ನು ಸಾಧಿಸಲು, ಆರ್ಥಿಕ ಸೇರ್ಪಡೆ, ಗೌರವ ಮತ್ತು ಸಮಾನತೆಯ ಸಂಸ್ಕೃತಿಯನ್ನು ಬೆಳೆಸಲು ಈ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯು ಅತ್ಯಗತ್ಯವಾಗಿದೆ.

ನಿಜವಾದ ಲಿಂಗ ಸಮಾನತೆಯನ್ನು ಪ್ರತ್ಯೇಕವಾಗಿ ಸಾಧಿಸಲು ಸಾಧ್ಯವಿಲ್ಲ. ಇದಕ್ಕೆ ಸಾಮೂಹಿಕ ಕ್ರಿಯೆ, ಹಂಚಿಕೆಯ ಜವಾಬ್ದಾರಿ ಮತ್ತು ನಿರಂತರ ಬದ್ಧತೆಯ ಅಗತ್ಯವಿರುತ್ತದೆ. ಮಹಿಳೆಯರು ಅಭಿವೃದ್ಧಿ ಹೊಂದಿದಾಗ ಸಮಾಜಗಳು ಅಭಿವೃದ್ಧಿ ಹೊಂದುತ್ತವೆ. ಸಮಾನತೆ ಸಾಕಾರಗೊಂಡಾಗ, ಮಾನವೀಯತೆಯು ಅಭಿವೃದ್ಧಿ ಹೊಂದುತ್ತದೆ.

**ಮಹಿಳಾ ಸಬಲೀಕರಣದ ಸಾಧನೆ ಹಾಗೂ ನಿರೀಕ್ಷೆ :**

ಪ್ರಸ್ತುತ ಸಂಸತ್ತಿನಲ್ಲಿ ಮಹಿಳೆಯರ ಪಾಲು ಶೇ.11.8 ಆಗಿದ್ದು, ರಾಜ್ಯಸಭೆಯಲ್ಲಿ ಶೇ.11, ಐಎಎಸ್‌ನಲ್ಲಿ ಶೇ.41 ಹಾಗೂ ಐಪಿಎಸ್‌ನಲ್ಲಿ ಶೇ.12ರಷ್ಟು ಇದೆ. ಸೇನಾ ವಿಭಾಗದಲ್ಲಿ ಭೂಸೇನೆಯಲ್ಲಿ ಶೇ.13.09, ವಾಯುಸೇನೆಯಲ್ಲಿ ಶೇ.6 ಮತ್ತು ನೌಕಾಸೇನೆಯಲ್ಲಿ ಶೇ.3.8ರಷ್ಟು ಮಹಿಳೆಯರು ಸೇವೆ ಸಲ್ಲಿಸುತ್ತಿದ್ದಾರೆ. ಹಾಗೆಯೇ, ಕ್ರೀಡಾ ಕ್ಷೇತ್ರದಲ್ಲಿಯೂ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿದ್ದು, ಕ್ರಿಕೆಟ್ ಹಾಗೂ ಹಾಕಿ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಾರೆ.

ದೇಶದಲ್ಲಿರುವ ಸುಮಾರು 8.5 ಲಕ್ಷ ಸಹಕಾರಿ ಸಂಸ್ಥೆಗಳಲ್ಲಿ 17 ಲಕ್ಷ ಮಹಿಳಾ ನಿರ್ದೇಶಕರಿದ್ದು, 25,385 ಮಹಿಳಾ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು 32 ಕೋಟಿ ಸದಸ್ಯರಲ್ಲಿ 10 ಕೋಟಿ ಮಹಿಳಾ ಸದಸ್ಯರಿದ್ದಾರೆ. ಕರ್ನಾಟಕದಲ್ಲಿಯೂ 6,361 ಮಹಿಳಾ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಮಹಿಳಾ ದಿನಾಚರಣೆಯಂತಹ ಜಾಗೃತಿ ಕಾರ್ಯಕ್ರಮಗಳ ಪರಿಣಾಮವಾಗಿ ಈ ಮಟ್ಟದ ಪ್ರಗತಿಯನ್ನು ಸಾಧಿಸಲ್ಪಟ್ಟಿದ್ದರೂ ಸಹ ಇದು ಸಾಕಷ್ಟಿಲ್ಲ, ಮಹಿಳೆಯರ ಭಾಗವಹಿಸುವಿಕೆ ಇನ್ನಷ್ಟು ಹೆಚ್ಚಾಗಬೇಕಿದೆ.

**ಸಹಕಾರಿ ಸಂಸ್ಥೆಗಳ ಮೂಲಕ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಉದ್ದೇಶಗಳ ಸಾಧನೆ :**

ಸಹಕಾರಿ ಸಂಸ್ಥೆಗಳು ಸಮಾನತೆ, ಭಾಗವಹಿಸುವಿಕೆ ಮತ್ತು ಹಂಚಿಕೆಯ ತತ್ವಗಳ ಮೇಲೆ ನಿರ್ಮಿಸಲ್ಪಟ್ಟಿವೆ. ಇಂತಹ ಸಹಕಾರಿ ಸಂಸ್ಥೆಗಳು 2026ರ ಅಂತರ ರಾಷ್ಟ್ರೀಯ ಮಹಿಳಾ ದಿನದ ದೃಷ್ಟಿಕೋನವನ್ನು ಸಾಧಿಸುವ ಅತ್ಯಂತ ಪರಿಣಾಮಕಾರಿ ವೇದಿಕೆಗಳಲ್ಲಿ ಒಂದಾಗಿದೆ. ವಿಶ್ವಸಂಸ್ಥೆ ಮತ್ತು IWD Campaign 2026ರ ಧ್ಯೇಯ ವಾಕ್ಯವು ಮಹಿಳೆಯರ ನೇತೃತ್ವದ ಜಾಗತಿಕ ಕರೆಗೆ ಅನುಗುಣವಾಗಿ ಸಹಕಾರಿ ಸಂಸ್ಥೆಗಳು ತಳಮಟ್ಟದಲ್ಲಿ ಲಿಂಗ ನ್ಯಾಯದ ಪ್ರಬಲ ಮಾಧ್ಯಮಗಳಾಗಬಹುದು. ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕೇವಲ ಆಚರಣೆಗಳಿಗೆ ಸೀಮಿತಗೊಳಿಸುವ ಬದಲು ಸಹಕಾರಿ ಸಂಸ್ಥೆಗಳು ಮಹಿಳಾ ಹಕ್ಕುಗಳು, ನಾಯಕತ್ವ ಮತ್ತು ಸಬಲೀಕರಣವನ್ನು ಉತ್ತೇಜಿಸುವ ರಚನಾತ್ಮಕ ಉಪಕ್ರಮಗಳ ಮೂಲಕ ವರ್ಷ ಪೂರ್ತಿ ಅನುಷ್ಠಾನದತ್ತ ಗಮನಹರಿಸಬೇಕು.

ಸಹಕಾರಿ ಸಂಸ್ಥೆಗಳು ಸಮಾನ ಸದಸ್ಯತ್ವ ಹಕ್ಕುಗಳನ್ನು ಉತ್ತೇಜಿಸುವ ಮೂಲಕ ಮಂಡಳಿಗಳು ಹಾಗೂ ನಾಯಕತ್ವದ ಪಾತ್ರಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಹೆಚ್ಚಿಸುವ ಮೂಲಕ ಮತ್ತು ಲಿಂಗ ತಾರತಮ್ಯವನ್ನು ತೆಗೆದು ಹಾಕುವ ಸಮಗ್ರ ನೀತಿಗಳನ್ನು ರಚಿಸುವ ಮೂಲಕ ಅವರು ಲಿಂಗ ನ್ಯಾಯವನ್ನು ಖಚಿತಪಡಿಸಿಕೊಳ್ಳಬಹುದು. ಕಾನೂನು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕುಂದುಕೊರತೆ ಪರಿಹಾರ ವ್ಯವಸ್ಥೆಗಳಿಗೆ ಪ್ರವೇಶವನ್ನು ಒದಗಿಸುವ ಮೂಲಕ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಮೂಲಕ ಸಹಕಾರಿ ಸಂಸ್ಥೆಗಳು "ಹಕ್ಕುಗಳು, ನ್ಯಾಯ, ಕ್ರಿಯೆ" ಎಂಬ ವಿಷಯವನ್ನು ಅರ್ಥಪೂರ್ಣ ತಳಮಟ್ಟದ ಬದಲಾವಣೆಗೆ ಭಾಷಾಂತರಿಸಬಹುದು.

ಅದೇ ಸಮಯದಲ್ಲಿ, ಸಹಕಾರಿ ಸಂಸ್ಥೆಗಳು ಆರ್ಥಿಕ ಅವಕಾಶಗಳು ಮತ್ತು ಸಾಮಾಜಿಕ ಜವಾಬ್ದಾರಿ ಉಪಕ್ರಮಗಳ ಮೂಲಕ ಮಹಿಳಾ ಸಬಲೀಕರಣವನ್ನು ಹೆಚ್ಚಿಸಬಹುದು. ಮಹಿಳಾ ನೇತೃತ್ವದ ಸ್ವ-ಸಹಾಯ ಗುಂಪುಗಳನ್ನು ಬೆಂಬಲಿಸುವುದು, ಕೌಶಲ್ಯ ಅಭಿವೃದ್ಧಿ ಮತ್ತು ಆರ್ಥಿಕ ಪ್ರವೇಶವನ್ನು ಒದಗಿಸುವುದು ಹಾಗೂ ಶಿಕ್ಷಣ, ಆರೋಗ್ಯ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಹಣಕಾಸು ಒದಗಿಸುವಂತಹ ಉಚಿತ ಖಚಿತ ಉಚಿಟಿ ವಿಧಾನವನ್ನು ಅಳವಡಿಸಿಕೊಳ್ಳುವುದು ಸುಸ್ಥಿರ ಪರಿಣಾಮವನ್ನು ಬೀರುತ್ತದೆ. ಜಾಗೃತಿ ಅಭಿಯಾನಗಳು, ಸಂಸ್ಥೆಗಳೊಂದಿಗೆ ಪಾಲುದಾರಿಕೆಗಳು ಮತ್ತು ಲಿಂಗ ಸಮಾನತೆಯ ಗುರಿಗಳ ನಿಯಮಿತ ಮೇಲ್ವಿಚಾರಣೆಯು ದೀರ್ಘಕಾಲೀನ ಪ್ರಗತಿಯನ್ನು ಖಚಿತಪಡಿಸುತ್ತದೆ. ಸಾಂಕೇತಿಕ ಆಚರಣೆಯನ್ನು ಮೀರಿ ನಿರಂತರ ಕ್ರಿಯೆಗೆ ಚಲಿಸುವ ಮೂಲಕ ಸಹಕಾರಿ ಸಂಸ್ಥೆಗಳು ನಿಜವಾಗಿಯೂ ಸಮಗ್ರ ಮತ್ತು ಲಿಂಗ-ಸಮಾನ ಸಮಾಜವನ್ನು ನಿರ್ಮಿಸುವಲ್ಲಿ ಪರಿವರ್ತನಾತ್ಮಕ ಪಾತ್ರವನ್ನು ವಹಿಸುತ್ತದೆ.

**ಉಪ ಸಂಹಾರ :**

2026ರ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದೇಶದಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಲಿಂಗ ಸಮಾನತೆಯು ಕೇವಲ ಮಾತಿನಲ್ಲೇ ಉಳಿಯಬಾರದು, ಅದು ಕ್ರಿಯೆಯಲ್ಲಿ ಅನಾವರಣಗೊಳ್ಳಬೇಕು. ಕಾನೂನು, ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳನ್ನು ನಿವಾರಿಸಲು ಎಲ್ಲರೂ ಕೈಜೋಡಿಸಬೇಕು. ಮಹಿಳೆಯರಿಗೆ ನ್ಯಾಯಯುತ ಪ್ರಾತಿನಿಧ್ಯ ಮತ್ತು ಸಮಾನ ಅವಕಾಶಗಳನ್ನು ಒದಗಿಸುವುದು ಸಮಾಜದ ಪ್ರಗತಿಗೆ ಮೂಲಾಧಾರವಾಗಿದೆ. ಸಹಕಾರಿ ಸಂಸ್ಥೆಗಳು, ಸಾಮಾಜಿಕ ಸಂಘಟನೆಗಳು ಹಾಗೂ ಪ್ರತಿಯೊಬ್ಬ ನಾಗರೀಕರೂ ಸಹ ಈ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳನ್ನು ಕೈಗೊಳ್ಳಬೇಕು. ಮಹಿಳೆಯರು ಅಭಿವೃದ್ಧಿ ಹೊಂದಿದಾಗ ಹಾಗೂ ಸಮಾನತೆ ಸಾಧಿಸಿದಾಗ ಸಮಾಜವು ಅಭಿವೃದ್ಧಿಯಾಗುತ್ತದೆ.

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ವಿಶೇಷ ಲೇಖನ

# ಅಂಗವಿಕಲತೆಯನ್ನೆ ಮೆಟ್ಟಿ ಎವರೆಸ್ಟ್‌ನಲ್ಲಿ ತ್ರಿವರ್ಣ ಧ್ವಜ ಹಾರಿಸಿದ ಯುವತಿ

– ಶ್ರೀ ಸೂರ್ಯಕಾಂತ ರ‍್ಯಾಕಲೆ, ಪ್ರಾಂತೀಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಕಲಬುರಗಿ ಪ್ರಾಂತ.



ಆಗತಾನೆ ಶಿಕ್ಷಣ ಪೂರೈಸಿ ಉದ್ಯೋಗ ಪಡೆಯುವ ಗೋಸ್ಕರ ಅಲೆದಾಡುತ್ತಿರುವ ರಾಷ್ಟ್ರ ಮಟ್ಟದ ವಾಲಿಬಾಲ ಪಟುವಾದ 24 ವರ್ಷದ ತರುಣಿ ಏಪ್ರಿಲ್ 11, 2011 ರ ರಾತ್ರಿಯೆಂದು ಪದ್ಮಾವತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಲಕ್ನೋದಿಂದ ದೆಹಲಿಗೆ ಜನಜಂಗೊಳಿಯಿಂದ ತುಂಬಿದ ಸಾಮಾನ್ಯ ಬೋಗಿಯಲ್ಲಿ ಪ್ರಯಾಣಿಸುತ್ತಿರುವಾಗ, ದಾರಿಯ ಮದ್ಯದಲ್ಲಿ ಸ್ಥಳೀಯ ದರೋಡೆಕೋರರ ಗುಂಪೊಂದು ಒಂಟಿ ಮಹಿಳಾ ಪ್ರಯಾಣಿಕಳೆಂದು ಭಾವಿಸಿ ಆಕೆಯ ಮೇಲೆ ದಾಳಿ ಮಾಡಿ ಕೊರಳಲಿದ್ದ ಚಿನ್ನದ ಸರವನ್ನು ಬಲವಂತವಾಗಿ ಕಸಿಯಲು ಪ್ರಯತ್ನಿಸುತ್ತಿದ್ದಾಗ ಆಕೆಯ ಅಮ್ಮ ಅತ್ಯಂತ ಪ್ರೀತಿಯಿಂದ ನೀಡಿದ ಉಡುಗೊರೆಯಾದ ಚಿನ್ನದ ಸರವನ್ನು ನೀಡಲು ನಿರಾಕರಿಸಿದಾಗ ಅವರು ಒಟ್ಟಿಗೆ ಹಲ್ಲೆ ಮಾಡಲು ಪ್ರಾರಂಭಿಸಿದರು. ಯುವತಿ ಕ್ರೀಡಾಭ್ಯಾಸದಲ್ಲಿ ಕಲಿತಿದ್ದ ಹಲವು ಪ್ರಯೋಗಗಳಿಂದ ದರೊಡೆಕೊರರ ಮೇಲೆ ವಾಪಸ್ಸು ಹಲ್ಲೆ ಮಾಡಿ ಕಠಿಣ ಸಮಯ ನೀಡಿ ಹೋರಾಡಿದರು ಹೆಚ್ಚು ಕಾಲ ವಿರೋಧಿಸಲು ಸಾಧ್ಯವಾಗಲಿಲ್ಲ. ಬೋಗಿಯಲ್ಲಿ ಇದ್ದ ಜನರು ದರೋಡೆಕೋರರಿಗೆ ಹೆದರಿ ತರುಣಿಯ ರಕ್ಷಣೆಗೆ ಯಾರೂ ಬರಲಿಲ್ಲ. ನಮ್ಮನ್ನು ಎದುರಿಸಿದ ಈ ಹುಡಗಿ ಮುಂದೆತಮಗೂ ಕಂಟಕವಾಗುತ್ತಾಳೆ ಎಂದು ಕಠೋರ ಮನಸ್ಸಿನ ದರೋಡೆಕಾರರು ತರುಣಿಯನ್ನು ಚಲಿಸುವ ರೈಲಿನಿಂದ ಹೊರಗೆ ಎಸೆದರು. ಎಸೆದರ ಬಸಕ್ಕೆ ಚಲಿಸುತ್ತಿದ್ದ ರೈಲ್ವೆಯ ಹಳಿಯ ಪಕ್ಕದ ಸಮಾಂತರ ಹಳೆಯ ಮೇಲೆ ಬಿದ್ದಾಗತನ್ನ ಎಡಗಾಲನ್ನು ಹಳಿಯಿಂದ ಹೊರಗೆ ಸರಿಸುವ ಮೊದಲೇ, ಸಮಾನಾಂತರ ಹಳಿಯಲ್ಲಿ ಬರುತ್ತಿದ್ದ ಮತ್ತೊಂದು ರೈಲು ಅವಳ ಕಾಲುಗಳ ಮೇಲೆ ಹರಿದಿತ್ತು. ಹಳಿಗಳ ಮೇಲೆ ರಕ್ತದಮಡುವಿನಲ್ಲಿ ನೋವಿನಿಂದ ಕಿರುಚುತ್ತಾ ಇದ್ದರು ಸಹ, ಅವಳ ಧ್ವನಿ ಯಾರಿಗೂ ಕೇಳಿಸಲಿಲ್ಲ ನೋವಿನಿಂದ ಕಿರುಚಾಡಿ ಕಿರುಚಾಡಿ ಕೋನೆಗೆ ಪ್ರಜ್ಞೆ ತಪ್ಪಿದಳು, ಅವಳು ಬಿದ್ದ ನಂತರ ಬೆಳಗ್ಗಿನ ಜಾವದವರಿಗೆ ಸುಮಾರು 45 ರೈಲುಗಳು ಸಂಚಾರಿಸಿದವು, ಮರುದಿನ ಬೆಳಗಿನ ಹೊತ್ತಿನಲ್ಲಿ ಗ್ರಾಮದ ಯುವಕರು ಬಹಿರ್ದಸೆಗೆ ಹೊದಾಗ ಹುಡಗಿಯ ಛಿದ್ರಗೊಂಡ ದೇಹವನ್ನು ಕಂಡು ಗ್ರಾಮಸ್ಥರ ಸಹಕಾರದಿಂದ ಅಲ್ಲಿನ ಪಿಂಟು ಕಾಶ್ಯಪ ಬರೇಲಿ ಜಿಲ್ಲಾ ಆಸ್ಪತ್ರೆಗೆ ಸೇರಿಸಿದರು, ಗ್ಯಾಂಗ್ರೀನ್ ಬರದಂತೆ ತಡೆಯಲು ಎಡಗಾಲನ್ನು ಮೊಣಕಾಲಿನ ಕೆಳಗಿನಿಂದ ತಕ್ಷಣವೇ ಕತ್ತರಿಸಲಾಯಿತ್ತು. ಈ ಅವಮಾನವಿಯ ಘಟನೆಯ ಕುರಿತಾದ ಸುದ್ದಿ ಎಲ್ಲಡೆ ಪಸರಿಸಿದ್ದರಿಂದ ಮಾಧ್ಯಮಗಳಲ್ಲಿ ಸಂಚಲನ ಮೂಡಿ ಪತ್ರಿಕೆಗಳು ಮತ್ತು ಟಿವಿ ಚಾನೆಲ್‌ಗಳು ರಕ್ತಸಿಕ್ತ ವಿವರಗಳನ್ನು ವರದಿ ಮಾಡಿದವು. ಇದ್ದರಿಂದ ಈ ಘಟನೆ ರಾಷ್ಟ್ರೀಯ ಸುದ್ದಿಯಾಗಿದ್ದರಿಂದ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರಎಚ್ಚೆತ್ತುಕೊಂಡು ಅಂದಿನ ಕೇಂದ್ರ ಸರಕಾರದ ಕ್ರೀಡಾ ಸಚಿವರಾಗಿದ್ದ ಶ್ರೀ ಅಜಯ್ ಮಾಕನ್ ಯುವತಿಯನ್ನುವಾರದ ನಂತರ ದೆಹಲಿಯ ಏಮ್ಸ್ ಆಸ್ಪತ್ರೆಗೆ ಸ್ಥಳಾಂತರಿಸಲು ವ್ಯವಸ್ಥೆ ಮಾಡಿದರು. ಅಲ್ಲಿ ನಾಲ್ಕು ತಿಂಗಳು ಚಿಕಿತ್ಸೆಯ ನಂತರ ದೆಹಲಿ ಮೂಲದ ಖಾಸಗಿ ಕಂಪನಿಯ ಸಹಕಾರದಿಂದ ಉಚಿತವಾಗಿ ಕೃತಕ ಕಾಲು ಜೋಡಿಸಲಾಯಿತು, ಘಟನೆ ಕುರಿತು ಹಲವರು ಯುವತಿಯದೆ ತಪ್ಪು ಎನ್ನುವ ರೀತಿಯಲ್ಲಿ ಬಿಂಬಿಸಲು ಯುವತಿರೈಲಿನಲ್ಲಿ ಟಿಕೆಟ್ ಇಲ್ಲದೇ ಪ್ರಯಾಣ ಮಾಡುತಿದ್ದಾಗ ಟಿಕೆಟ್ ಕಲೇಕ್ಟರ್ ಇಂದ ತಪ್ಪಿಸಿಕೊಳ್ಳುವಾಗ ರೈಲಿನಿಂದ ಹಾರಿದ್ದಾಳೆ. ಇನ್ನು ಕೆಲವರು ಅವಳು ಆತ್ಮಹತ್ಯೆ ಮಾಡಿಕೊಳ್ಳುವುದಗೊಸ್ಕರ ರೈಲಿನಿಂದ ಹಾರಿದ್ದಾಳೆ ಎಂದು ಸುಳ್ಳು ಸುದ್ದಿ ಹಬ್ಬಿಸಿದರು, ಇದರಿಂದ ನೊಂದಯುವತಿ ಕಾಣೆಯಾದ ಕಾಲನ್ನು ನೋಡಿದಾಗಲೆಲ್ಲಾದೌರ್ಬಲ್ಯ ಎಂದು ಭಾವಿಸುತ್ತ, ಚಿಕ್ಕ ವಯಸ್ಸಿನಲ್ಲಿಯೇ ದೇಹದ ಒಂದು ಭಾಗವನ್ನು ಕಳೆದುಕೊಳ್ಳುವುದು ದೊಡ್ಡ ವಿಷಯ.ಅವಳನ್ನು ಟೀಕಿಸುತ್ತಿದ್ದ ಜನರಿಂದ ಭಯಭಿತಳಾದರು ಹಿಯಾಳಿಸಿದವರನ್ನು ಮಾತಿನಿಂದಲ್ಲ ಕ್ರಿಯೆಯಿಂದ ಉತ್ತರಿಸಲು ನಿರ್ಧರಿಸಿದಳು.

ಚಿಕಿತ್ಸೆಯ ವೇಳೆಯಲ್ಲಿ ಹಾಸಿಗೆಯ ಮೇಲೆ ಪತ್ರಿಕೆ ಓದುತಿದ್ದಾಗ ಏವರೆಸ್ಟ್ ಕುರಿತಾದ ಲೇಖನದಲ್ಲಿ ಎವರೆಸ್ಟ್‌ಗೆ ಸಂಪರ್ಕಿಸುವ 15 ಮಾರ್ಗಗಳ ಉಲ್ಲೇಖವಾಗಿದ್ದು ಅದರಲ್ಲಿ 14 ಮಾರ್ಗಗಳು ಪರ್ವತಾರೋಹಿಗಳು ಬಳಸುತಿದ್ದರು 15ನೇ ಮಾರ್ಗ ಇಲ್ಲಿವರೆಗೆ ಯಾರು ಬಳಸಿಲ್ಲ ಎನ್ನುವ ಉಲ್ಲೇಖ ಯುವತಿಯ ಮನಸ್ಸಿನಲ್ಲಿ ಅಚ್ಚಳಿಯವಾಗಿ ಮೂಡಿತು. ತನ್ನ ಮನಸ್ಸಿನಲ್ಲಿ ಇದ್ದ 15ನೇ ಮಾರ್ಗದ ಮುಖಾಂತರ ಎವರೆಸ್ಟ್ ಹತ್ತಬೇಕು ಎನ್ನುವ ಭಾವನೆಯನ್ನು ಸೋದರ ಮಾವರಾದ ಓಂಪ್ರಕಾಶ ಹತ್ತಿರ ಹೇಳಿದಾಗ. ದೃಢನಿಶ್ಚಯ ವಿದ್ದರೆ ಖಂಡಿತ ನೀನು ಅದನ್ನು ಸಾಧಿಸಬಹುದು, ಜಗತ್ತಿನಲ್ಲಿ ಇಲ್ಲಿವರೆಗೆ ಯಾರೂ ಕೃತಕ ಕಾಲಿನಿಂದ ಎವರೆಸ್ಟ್ ಶಿಖರವನ್ನು ಹತ್ತಿಲ್ಲ ಎಂದು ಸೋದರಮಾವ ಹೇಳಿದ ಮಾತು ಅವಳಿಗೆ ಮತ್ತೆ ಪ್ರೇರೆಪಿಸಿತ್ತು.

ಏವರೆಸ್ಟ್ ಸಿದ್ಧತೆಯನ್ನು ಪ್ರಾರಂಭಿಸಲು ಮಾರ್ಗದರ್ಶನ ಬೇಕಾಗಿದ್ದರಿಂದ ಪತ್ರಕರ್ತರೊಬ್ಬರ ಸಹಾಯದಿಂದ ಬಚೇಂದ್ರಿ ಪಾಲ್ ಅವರ ದೂರವಾಣಿ ಪಡೆದುಕರೆ ಮಾಡಿ ಪರಿಚಯಿಸಿಕೊಂಡಳು. ಅವರ ಒಪ್ಪಿಗೆ ಪಡೆದುಕೊಂಡು ಆಸ್ಪತ್ರೆಯಿಂದ ನೇರವಾಗಿ ಹೊರಬಂದು ಕಾಲಿನ ಹೊಲಿಗೆಗಳೊಂದಿಗೆ ಬಚೇಂದ್ರಿ ಪಾಲ್‌ಅವರನ್ನು ಭೇಟಿಯಾಗಲು ಜಮಶೆಡಪುರಕ್ಕೆ ಹೋದಾಗ ಬಚೇಂದ್ರಿ ಪಾಲ್‌ಖುದ್ದಾಗಿ ಆತ್ಮಿಯವಾಗಿ ಸ್ವಾಗತಿಸಿ ಯುವತಿಯ ಮಾತನ್ನು ಆಲಿಸಿದ ನಂತರಈ ಸ್ಥಿತಿಯಲ್ಲಿ ನೀವು ತುಂಬಾದೊಡ್ಡ ನಿರ್ಧಾರವನ್ನು ತೆಗೆದುಕೊಂಡಿದ್ದೀರಿ. ನೀವು ಈಗಾಗಲೇ ನಿಮ್ಮ ಆಂತರಿಕ ಎವರೆಸ್ಟ್ ಅನ್ನು ಗೆದ್ದಿದ್ದೀರಿಎಂದು ತಿಳಿಯಿರಿ. ನಿಮ್ಮ ಆತ್ಮವಿಶ್ವಾಸದಿಂದ ಈಗ ನೀವು ಪರ್ವತವನ್ನು ಹತ್ತಬೇಕಾಗಿದೆ, ನೀವು ಏನನ್ನು ಹೊಂದಿದ್ದೀರಿ ಎಂಬುದನ್ನು ಜಗತ್ತಿಗೆ ತೋರಿಸಲು ಮಾತ್ರ. ಸಾಧ್ಯ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 33
Permitted to Post under Periodical Post as per the Letter G3/14/RNP/2024-25 DATE 29.09.2025



ಎಂದು ಪ್ರೋತ್ಸಾಹದ ಮಾತನ್ನು ಆಡಿದರು. ಬಚೇಂದ್ರಿ ಪಾಲ್ ಅವರನ್ನು ಭೇಟಿಯಾದ ನಂತರ ಮನೆಗೆ ಹಿಂತಿರುಗದೇ ಅಲ್ಲಿಂದ ಏಷ್ಯಾದ ಅತ್ಯುತ್ತಮ ಶಾಲೆಯಾದ ಉತ್ತರಕಾಶಿಯ ನೆಹರು ಇನ್ಸ್ಟಿಟ್ಯೂಟ್‌ಆಫ್ ಮೌಂಟೇನಿಯ-ರಿಂಗ್‌ನಿಂದ ಮೂಲಭೂತ ಕೋರ್ಸ್ ಪಡೆದು, 18 ತಿಂಗಳ ಕಠಿಣ ತರಬೇತಿಯಲ್ಲಿ "ಹಬ್ಬ, ರಜೆಗಳನ್ನು ಲೆಕ್ಕಸದೇ ತರಬೇತಿ ಪಡೆದು ಚಿಕ್ಕದಾದ, ಕಡಿಮೆ ಅಪಾಯ ಕಾರಿಯ ಪರ್ವತಗಳನ್ನು ಹತ್ತಿ ತರಬೇತಿ ಮಾಡಿಕೊಂಡಳು.

ದಿನಾಂಕ ಏಪ್ರಿಲ್ 1, 2013 ರಂದು ದಂಡಯಾತ್ರೆಯನ್ನು ಪ್ರಾರಂಭಿಸಿದಾಗ ಕೃತಕ ಅಂಗವು ಕೆಲವು ವಿಶಿಷ್ಟ ಸಮಸ್ಯೆಗಳನ್ನು ಉಂಟುಮಾಡಿ. ಕೆಲವೊಮ್ಮೆ ಹೊಲಿಗೆಗಳಿಂದ ರಕ್ತ ಹೊರಬರುತ್ತಿತ್ತು. ಆದರು ನಾಲ್ಕು ಶಿಬಿರಗಳನ್ನು ದಾಟಿದಾಗ ಶಿಖರ 3500 ಅಡಿ ಇರುತ್ತದೆ ಆದರೂ ಮುಂದಿನ ಹಾದಿ ಕಠಿಣವಾಗಿದ್ದರು ಸಹ ಪ್ರಯಾಣ ಬೆಳಿಸಿದಾಗ ಈ ಪ್ರದೇಶ ಹಲವಾರು ಜೀವಗಳನ್ನು ಬಲಿ ತೆಗೆದುಕೊಂಡಿದೆ ಎಂಬುದಕ್ಕೆ ಪರ್ವತಾರೋಹಿಗಳ ಮೃತ ದೇಹಗಳು ಎಲ್ಲೆಡೆ ಹರಡಿಕೊಂಡಿರುವುದನ್ನು ಹಾಗೂ ಕೆಲವು ಅಸ್ಥಿಪಂಜರಗಳಾಗಿ ಮಾರ್ಪಟ್ಟಿದ್ದವು ಮತ್ತು ಭೇಟಿಯಾದ ಬಾಂಗ್ಲಾದೇಶದ ಪರ್ವತಾರೋಹಿಯೊಬ್ಬರು ತನ್ನ ಮುಂದೆಯೇ ಕೊನೆಯುಸಿರೆಳೆದರು. ಹಿಂತಿರುಗಲು ಸಾಧ್ಯವಿಲ್ಲ ಅಥವಾ ಶಿಖರವನ್ನು ತಲುಪುವ ಮೊದಲು ನಾನು ಸಾಯಲು ಸಾಧ್ಯವಿಲ್ಲ ಎನ್ನುವ ಅಚಲ ಮನಸ್ಸಿನಿಂದನುಗ್ಗಿ 52 ದಿನಗಳ ನಂತರ ಮೇ 21, 2013 ರಂದು ಎವರೆಸ್ಟ್ ಶಿಖರವನ್ನು ತಲುಪಿ ತ್ರಿವರ್ಣಧ್ವಜ ಹಾರಿಸಿದ ಜಗತ್ತಿನ ಮೊದಲ ಅಂಗವಿಕಲ ಮಹಿಳೆ ಪದ್ಮಶ್ರೀ ಪುರಸ್ಕೃತರಾದ ಅರುಣಿಮಾ ಸಿನ್ಹಾ ಮಹಿಳೆಯರಿಗೆ ಹಾಗೂ ಸಮಾಜಕ್ಕೆ ಪ್ರೇರಣೆದಾಯಕ ಶಕ್ತಿ ಸ್ವರೂಪ.

**ಆರಂಭಿಕ ಜೀವನ ಮತ್ತು ಕುಟುಂಬದ ಹಿನ್ನೆಲೆ:**

ಉತ್ತರ ಪ್ರದೇಶದ ಲಕ್ನೋದಿಂದ 200 ಕಿಲೋಮೀಟರ್‌ದೂರದಲ್ಲಿರುವ ಸಣ್ಣ ಜಿಲ್ಲೆಯಾದ ಅಂಬೇಡ್ಕರ್ ನಗರದವಳು. ತಂದೆ ಸೈನ್ಯದಲ್ಲಿ ಎಂಜಿನಿಯರ್ ಆಗಿದ್ದರುತಾಯಿ ಜ್ಞಾನಬಾಲಾ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ಮೇಲ್ವಿಚಾರಕರಾಗಿದ್ದರು. ತಂದೆ ಮೂರು ವರ್ಷದವನಿದ್ದಾಗ ನಿಧನರಾದರು. ಅಕ್ಕ ಲಕ್ಷ್ಮಿ ಸಿನ್ಹಾ ಮತ್ತು ಕಿರಿಯ ಸಹೋದರ ರಾಹುಲ್ ಸಿನ್ಹಾ.ತಂದೆಯ ಮರಣದ ನಂತರ ಸೋದರ ಮಾವ ಓಂಪ್ರಕಾಶ್ ಕುಟುಂಬ ನಿರ್ವಹಣೆ ನೋಡಿಕೊಂಡರು. ಅರುಣಿಮಾ ಬಾಲ್ಯದಿಂದಲೇ ಕ್ರೀಡಾ ಆಸಕ್ತಿ ಬೆಳಸಿಕೊಂಡವಳು, ಶಾಲ ದಿನಗಳಲ್ಲಿ ಫುಟ್‌ಬಾಲ್ ಮತ್ತು ಕಾಲೇಜ ಅಭ್ಯಾಸ ಮಾಡುವಾಗ ರಾಷ್ಟೀಯ ಮಟ್ಟದ ವಾಲಿಬಾಲ್‌ನಲ್ಲಿ ಪ್ರತಿನಿಧಿಸಿದಳು, ಸ್ನಾತಕೋತ್ತರ ಪದವಿಯ ನಂತರ ಕಾನೂನು ಅಧ್ಯಯನ ಮಾಡಿದಳು.

**ಸಾಧನೆಗಳು:**

ಎವರೆಸ್ಟ್ ಜೊತೆಗೆ, ಅವರು ಕಿಲಿಮಂಜಾರೊ (ಆಫ್ರಿಕಾ), ಎಲ್ಬ್ರಸ್ (ಯುರೋಪ್), ಕೊಸ್ಸಿಯುಸ್ಕೊ (ಆಸ್ಟ್ರೇಲಿಯಾ), ಅಕಾನ್ಕಾಗುವಾ (ದಕ್ಷಿಣ ಅಮೆರಿಕಾ), ಡೆನಾಲಿ (ಉತ್ತರ ಅಮೆರಿಕಾ), ಮತ್ತು ವಿನ್ಸನ್ (ಅಂಟಾರ್ಕ್ಟಿಕಾ) ಪರ್ವತ ಶ್ರೇಣಿಗಳನ್ನುಏರಿದ್ದಾರೆ.

**ಪ್ರಶಸ್ತಿಗಳು:**

ಪದ್ಮಶ್ರೀ (2015) ಮತ್ತು ಟೆನ್ಸಿಂಗ್ ನಾರ್ಗೆ ಸಾಹಸ ಪ್ರಶಸ್ತಿ ಜೊತೆಗೆ ಹಲವು ಪ್ರಶಸ್ತಿಗಳು ಪಡೆದುಕೊಂಡರು

**ಸಮಾಜ ಸೇವೆ:**

ಅಂಗವಿಕಲರು ಮತ್ತು ಹಿಂದುಳಿದವರಿಗಾಗಿ ಕ್ರೀಡಾ ಅಕಾಡೆಮಿಯಾದ ಶಹೀದ್‌ಚಂದ್ರ ಶೇಖರ್ ಆಜಾದ್ ವಿಕ್ಲಾಂಗ್‌ಖೇಲ್ ಅಕಾಡೆಮಿಯನ್ನು ಸ್ಥಾಪಿಸಿ ತಮ್ಮನ್ನು ತಾವು ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

ಇವರಿಗೆ,

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003